ಕೊರವಂಜಿ

ಸಂಪುಟ ೧೫ | ಆಗಸ್ಟ್ ೧೯೫೫ | ಸಂಚಿಕೆ ೫

ಕುಹಕಿಡಿಗಳು

ಯೂರೋಪಿನಲ್ಲೊಂದೆಡೆ, ಸಾಮೂಹಿಕವಾಗಿ ನಿವಾರಿಸಲ್ಪಟ್ಟ ಮಕ್ಕಳ ಬೂಟ್ಸುಗಳ ಪರ್ವತವನ್ನು ನೋಡಿದ ಪಂ॥ ನೆಹ್ರೂ ಅವರು ಬಲು ವ್ಯಸನಗೊಂಡರಂತೆ.

—ಪುಣ್ಯ! ಭಾರತದ ಎಳೆಯ ಮಕ್ಕಳು ಬೂಟ್ಸು ಬಿಚ್ಚಿ ಪೇರಿಸಿಟ್ಟು ಸಾಮೂಹಿಕವಾಗಿ ಸಾಯುವುದಿಲ್ಲ!!

* * *

ಎರಡನೆ ಪಂಚವಾರ್ಷಿಕ ಯೋಜನೆಯ ಸಭೆಯಲ್ಲಿ ಹಟಾತ್ತನೆ ಒಬ್ಬ ಸದಸ್ಯರೆದ್ದು "ಸ್ವಾಮಿ. ಕಚ್ಚದೆ ಇರುವ ಕುರ್ಚಿಗಳನ್ನು ಸಭಿಕರಿಗೆ ದೊರಕಿಸುವ ಯೋಜನೆಯನ್ನು ಮೊದಲು ಮಂಜೂರ್ಮಾಡಬೇಕು" ಎಂದು....ಸವರಿಕೊಳ್ಳುತ್ತಾ ಹೇಳಿದುದು ಸುಳ್ಳಂತೆ.

* * *

ಜಿನಿವಾದಲ್ಲಿ ನಡೆದ ಶಿಖರ ಸಮ್ಮೇಳನದಲ್ಲಿ ಪ್ರಮುಖ ನಾಲ್ವರು ನಾಯಕರೂ, ಕೃಷ್ಣಮೆನನ್ನರನ್ನು ದಿನಕ್ಕೆ ನಾಲ್ಕು ಬಾರಿ ನೋಡಿ ಮಾತಾಡಿಸುತ್ತಿದ್ದರಂತೆ.

* * *

ಮೂರನೆ ಹೆಂಡತಿ ಮನೆಗೆ ಬಂದು, ಸಾರಿಗೆ ಒಗ್ಗರಣೆ ಹಾಕಲು ಸೌಟಿನಲ್ಲಿ ಸಾಸುವೆ ತುಪ್ಪ ಕುದಿಸಿದಾಗ ಆ ಸಾಸುವೆ ಕೂಡ ಸಿಡಿಯುವುದಿಲ್ಲವಂತೆ.

*   *   *

ಪಂ|| ನೆಹ್ರೂ ಅವರು ಇನ್ನೊಂದು ನಾಲ್ಕು ವಾರ ಎಲ್ಲಾದರೂ ಪ್ರವಾಸ ಹೋದರೆ, ನಮಗೂ ರಜಾ ಸಿಕ್ಕಿದಂತಾಗುತ್ತದೆ ಎಂದು ತಿರುಪತಿ ವೆಂಕಟರಮಣನಿಗೆ ಉಳಿದ ಕೇಂದ್ರ ಮಂತ್ರಿಗಳೆಲ್ಲಾ ಹರಸಿಕೊಂಡಿದ್ದಾರೆ ಎನ್ನುವುದು ಶುದ್ಧ ಸುಳ್ಳು!

*   *   *

ಏಕಾದಶಿ ಅವತಾರ ನಡೆಸೋರೂ ಕೂಡ, "ದಶಾವತಾರ" ನಾಟಕವನ್ನು ನೋಡಿಯೇ ನೋಡುತ್ತಿದ್ದಾರಂತೆ.

*   *   *

ಮುಂಬರುವ ಚುನಾವಣೆಗಳ ಪ್ರಯುಕ್ತ, ಮುಂದಿನ ವರ್ಷ ಎಲ್ಲಾ ಸಂಸ್ಥಾನ ಗಳ ಸರ್ಕಾರಿ ಕಾರ್ಯಗಳು ಬಂದ್! ಎಂದು ಕುಹಕಿಗಳೊಬ್ಬರು ಪಲುಕಿದ್ದಾರಂತೆ.

*   *   *

ತೃತಿಯ ಪಂಚವಾರ್ಷಿಕ ಯೋಜನೆಯಲ್ಲಿ, ಪ್ರತಿಯೊಂದು ಹೋಟಲಿನಲ್ಲೂ, ದಂತ ವೈದ್ಯನ ಉಚಿತ ಚಿಕಿತ್ಸೆ ದೊರೆಯುವ ಏರ್ಪಾಡು ಮಾಡಲಾಗುತ್ತೆಂಬುದು ಶುದ್ಧ ಸುಳ್ಳು!!

*   *   *

ಪ್ರಪಂಚ ಶಾಂತಿಗೆ ಅತ್ಯಗತ್ಯವಾದುದು ಇನ್ನೊಂದು ಶಿಖರ ಸಮ್ಮೇಳನ. ಆದರೆ, ಅದು ಐಕ್ ಮತ್ತು ಬಲ್ಗೆನಿನ್ ಇವರಿಬ್ಬರ ಸಮ್ಮೇಳನ—ಗೌರಿಶಂಕರದ ತುದಿಯಲ್ಲಿ—ಎಂದು ಸಲಹೆ ಬಂದಿದೆ.

—ಸಲಹೆ ಸಾರ್ಥಕವಾದೀತು! ಇವರುಗಳ ಸಹಾಯಕ್ಕೆ ಷರ್ಪಾಗಳಿಲ್ಲದಿದ್ದರೆ—

*   *   *

"ಎರಡನೆ ಪಂಚಿ ವಾರ್ಷಿಕ ಯೋಜನೆ" ಶಿರೋನಾಮವನ್ನು ನೋಡಿ, ಮನೆಂಯಾಕೆ ಆತನಿಗೆ ಇದ್ದೊಂದ ಸರಿಗೆ ಪಂಚೆಯನ್ನು ಹಳೇಪಾಗಿನ ಕಂಬಿಯವನಿಗೆ ಕೊಟ್ಟೇಬಿಟ್ಟಳಂತೆ—

*   *   *

ಸೀತಾ ವನವಾಸಮಾಡಿದಾಗ ಯಾವ ಫ್ಯಾಷನ್ನಿನ ನಾರುಮಡಿ ಉಟ್ಟಿದ್ದಳು? ಎಂಬ ವಾಗ್ಯುದ್ಧದ ಪರಿಣಾಮ—ಸಿನಿಮಾ ತಾರೆ, ನಿದರ್ಶಕ ಇವರುಗಳ ವಿಚ್ಛೇದನವಂತೆ!!

ಉರಿಗಾಳು

ಅಮೇರಿಕಾದಿಂದ ಹಿಂತಿರುಗಿದ ಭಾರತೀಯರು ಅಮೇರಿಕಾ ಪರವಾಗಿಯೇ ವಾದಿಸುತ್ತಿದ್ದಾರೆಯೆ, ಎಂದು ಅಮೇರಿಕನ್ನರು ಸಂಶೋಧನೆ ನಡೆಸುತ್ತಿದ್ದಾರಂತೆ........ ಉಂಡಮನೆಗೆ ನಾವೆಂದೂ ಎರಡು ಬಗೆದಿಲ್ಲವಲ್ಲಾ.

*　　*　　*

ಚಿನ್ನದ ಗಣಿಯನ್ನು ಸರ್ಕಾರವೇ ನಡೆಸುತ್ತಾರಂತೆ...."ಆಳವಾಗಿ" ಯೋಚನೆ ಮಾಡಬೇಕಾದ ವಿಷಯ ಇದು, ಎಂದು ಕಂಪನಿಯವರು ಹೇಳುತ್ತಿದ್ದಾರೆ.

*　　*　　*

ರಷ್ಯಾದಲ್ಲಿ ನಾನು "ಕಬ್ಬಿಣದ ಪರದೆ"ಯನ್ನು ಕಾಣಲೇ ಇಲ್ಲ, ಎಂದು ನೆಹರು ಹೇಳಿದಾಗ, ಅಮೇರಿಕನ್ ನೇತ್ರಚಿಕಿತ್ಸಾ ಪ್ರವೀಣರೊಬ್ಬರು, ನೆಹರು ಅವರ ಕಣ್ಣನ್ನು ಸರಿಪಡಿಸಿಕೊಡುವುದಾಗಿ, ಪತ್ರ ಬರೆದಿದ್ದಾರಂತೆ.

*　　*　　*

ವ್ಯವಸಾಯಮಾಡಿ, ಬಂದ ಲಾಭದಿಂದ ಸ್ಕೂಲನ್ನು ಅಭಿವೃದ್ಧಿಗೆ ತರುವ ಹೊಸ "ಭೂದಾನ" ಚಳುವಳಿಯನ್ನು ಸ್ವಾಗತಿಸುತ್ತ, ವಿದ್ಯಾರ್ಥಿ ಸಂಘವೊಂದು ತಮಗೆ ಸರ್ಕಾರ "ವಿದ್ಯಾದಾನ" ಮಾಡಬೇಕೆಂದೂ, ಅದಕ್ಕಾಗಿ ವಿದ್ಯಾರ್ಥಿಗಳು ಸಂಬಂಧಪಟ್ಟ ಕಚೇರಿಗಳಿಗೆ ಪಾದಯಾತ್ರೆ ಮಾಡಲು ಸಿದ್ಧರಿರುವುದಾಗಿಯೂ ಠರಾವು ಮಾಡಿರುವರಂತೆ.

*　　*　　*

ಭಾರತದ ಆದ್ಯಂತ ಪಾನನಿರೋಧ ಜಾರಿಗೆ ಬಂದಕೂಡಲೇ, ವಿದೇಶಗಳಿಗೆ ಪ್ರಯಾಣಮಾಡು ಭಾರತೀಯರ ಸಂಖ್ಯೆ ಹೆಚ್ಚುವುದೆಂದೂ, ಅದಕ್ಕಾಗಿ ನೌಕಾ ಹಾಗೂ ವಿಮಾನ ಸೌಕರ್ಯಗಳನ್ನು ಹೆಚ್ಚಿಸಬೇಕೆಂದೂ ಸರ್ಕಾರ ಯೋಚಿಸುತ್ತಿದೆಯಂತೆ.

*　　*　　*

ಎಲ್ಲ ತರಗತಿಗಳ ಎಲ್ಲ ಪಾಠಗಳಿಗೂ ಗೊತ್ತಾದ ಎಲ್ಲ ಪಠ್ಯಪುಸ್ತಕಗಳು ಈಗ ಅಚ್ಚಾಗಿ, ಬಿಕರಿಗೆ ಸಿದ್ಧವಾಗಿದೆ, ಎಂದು ಅಧಿಕೃತ ಪ್ರಕಟಣೆಯೊಂದು ಹೇಳುತ್ತದೆ ... ತಂದೆ ತಾಯಿಗಳು ನಾಳೆಯಿಂದ, ಸಾಲಕ್ಕಾಗಿ ಪ್ರಯತ್ನಿಸಬಹುದು.

*　　*　　*

ಸಂಸ್ಕೃತಿ ಪ್ರಸಾರ ಕಾರ್ಯಕ್ರಮಗಳು ಇನ್ನುಮೇಲೆ ಎಲ್ಲ ಶಾಲೆಗಳಲ್ಲೂ ಬಿರುಸಿನಿಂದ ನಡೆಯಲು ಏರ್ಪಾಟಾಗಿದೆ... ಮೊದಲೇ ನಮ್ಮ ಹುಡುಗರು "ಸ್ಕೂಲು" ಅಂದರೆ ಹೆದರಿ ನಡುಗುವರು; ಇನ್ನು....?

*   *   *

ಮುಂದೆ ಕುಳಿತು, "ಧತ್" ಎಂದು ಹೇಳಿದ ತಕ್ಷಣವೇ "ಆಫ್" ಆಗುವ ಹೊಸ ರೇಡಿಯೊ ಒಂದನ್ನು ಭಾರತದಲ್ಲಿ ತಯಾರುಮಾಡಿದಾರಂತೆ....ಅದನ್ನು ಗಳಿಗೆ ಗಳಿಗೆಗೂ "ಆನ್" ಮಾಡುತ್ತಿರಬೇಕಲ್ಲಾ, ನಾವು.

*   *   *

ದೇವಸ್ಥಾನಗಳ ಜೀರ್ಣೋದ್ಧಾರವಾಗಬೇಕಾದರೆ, ಅಲ್ಲಿ ನೈವೇದ್ಯ ಹೇರಳವಾಗಿ ದೊರೆಯುವಂತಾಗಬೇಕು (ಭಾಷಣ) ಅಂದರೆ, ಅಜೀರ್ಣೋದ್ಧಾರವೇ ಸರಿ.

*   *   *

ಅಮೇರಿಕಾ ಇಂಗ್ಲಂಡ್ ಮುಂತಾದ ಶ್ರೀಮಂತ ರಾಷ್ಟ್ರಗಳಲ್ಲಿ ಉನ್ನತ ಮಟ್ಟದ ವೈದ್ಯಶಿಕ್ಷಣ ಪಡೆದವರು ಶ್ರೀಮಂತ ರೋಗಚಿಕಿತ್ಸೆಗೆ ಮಾತ್ರ ಸಾಮರ್ಥ್ಯ ಪಡೆದಿರುತ್ತಾರೆ, ಎಂದು ವರದಿಯಾಗಿದೆ.

*   *   *

ಮುಂದಿನ ಚುನಾವಣೆಯಲ್ಲಿ ತಮ್ಮ ಪಕ್ಷ ಗೆದ್ದುಬಂದರೆ, ಸಂಸ್ಥಾನದ ಎಲ್ಲ ನಗರಗಳ ಎಲ್ಲ ರಸ್ತೆಗಳಿಗೂ ಹೊಸ ಹೆಸರುಗಳನ್ನಿಡುವುದಾಗಿ ವಾಗ್ದಾನ ಮಾಡುವುದಾಗಿ ಹಲವರು ಘೋಷಿಸುತ್ತಿದಾರೆ.

*   *   *

ಭೂದಾನ ಚಳುವಳಿ ಮುಗಿಯುತ್ತಲೂ, ಸಂಸ್ಥಾನಾದ್ಯಾಂತ ಎಲ್ಲ ಶಾಲೆಗಳಲ್ಲೂ ಗುದ್ದಲಿಪೂಜೆ ಸಮಾರಂಭವನ್ನು ಸರಸ್ವತಿಪೂಜೆ ದಿನ ನಡೆಸಲು ಏರ್ಪಾಟಾಗಿದೆಯಂತೆ.

*   *   *

ಮಿಕ್ಕಿರೂನಿ ಎಂಬ ಹೆಸರಿನ ಪ್ರಖ್ಯಾತ ಹಾಲಿವುಡ್ ಗಂಡುತಾರೆ, ಲಾನಾ ಟರ್ನರ್ ಎಂಬ ಸಿನಿಮತಾರೆಯ ಮಾಜಿ ಗಂಡನ ಮಾಜಿ ಹೆಂಡತಿಯ ಮಾಜಿ ಮಾಜಿ ಗಂಡನಂತೆ .. ಮಿಕ್ಕಿರೂನಿಗೆ ಈ ಸುದ್ದಿಯನ್ನು ಕೂಡಲೇ ತಿಳಿಸಬೇಕು.

*   *   *

ನಮ್ಮೂರು ಹೈಸ್ಕೂಲು

ನಮ್ಮೂರಲ್ಲಿ ಒಂದು ಹೈಸ್ಕೂಲನ್ನು ನಾವೂ ಬಹಳ ಸಾಹಸದಿಂದ ಪ್ರಾರಂಭಿಸಿದೆವು. ಅದರ ಕಥೆ ಹೇಳಿದರೆ, ಇತರೇ ಊರುಗಳಲ್ಲಿರುವ ನಮ್ಮಂತಹ ಹುಚ್ಚರಿಗೂ ಕೊಂಚ ಬುದ್ಧಿ ಬಂದೀತು.

ಕಟ್ಟಡ ಇಲ್ಲದೆ, ಸ್ಕೂಲು ನಡೆಯಿಸಬಹುದು, ಎಂದು ಸರ್ಕಾರವೇ ತೋರಿಸಿಕೊಟ್ಟಕಾಲ ಅದು. ಕಾಲೇಜುಗಳನ್ನೇ ಮಾರಮ್ಮನ ಗುಡಿಯಲ್ಲೂ ಅಶ್ವತ್ಥಕಟ್ಟೆಯ ಮೇಲೂ ಛತ್ರ ಚಾವಡಿಗಳಲ್ಲೂ ಮಾಡಬಹುದೆಂದು ಜಗತ್ತಿಗೆ ತಿಳಿಸಿದ 'ಮಾದರಿ ಕಾಲ' ನಮ್ಮೂರಲ್ಲೂ ಹಾಳುಬಿದ್ದ ಗುಡಿಯೊಂದಿತ್ತು; ಮುರುಕಲು ಮಂಟಪ, ಮೂರು, ಮೇಷ್ಟರುಗಳಿಗೊಂದು ಗೋಡೌನ್! ಗೋಡೌನ್ ಎಂಬುದೇ ಮೂಲ ಮಂತ್ರ, ಅವರ ಬದುಕಿಗೆ.

ಹತ್ತೆಕ್ರೆ ಜಮೀನನ್ನೂ ಸಂಪಾದಿಸಿದೆವು, ನಾವು, ನಮ್ಮ ಶಾಲೆಯನ್ನು ಆಚಂದ್ರಾರ್ಕ ನಡೆಸಿಕೊಂಡು ಬರುವುದಕ್ಕೆ. ಯಾವ ಕೆಲಸಕ್ಕೂ ನಾಲಾಯಕ್ಕೆನಿಸಿ, ನಮ್ಮೂರಲ್ಲೇ ತಂಟೆ ತಕರಾರುಗಳನ್ನೆಬ್ಬಿಸಿ ತರಲೆ ಜೀವನ ನಡೆಯಿಸಿ, ನಮ್ಮೂರಿನವರಿಗೆಲ್ಲ ಸೆಕ್ರಟೇರಿಯಟ್ ಕಾಣಿಸಿ ಕಾಸು ಸಂಪಾದಿಸುತ್ತಿದ್ದ ನಾಲ್ಕುಜನ ಗ್ರಾಜುಯೇಟ್ಸುಗಳನ್ನೇ 'ಉಪಾಧ್ಯಾಯ'ರಾಗಿ ನೇಮಿಸಬೇಕಾಯಿತು. ಉಳಿದವರೊಬ್ಬರನ್ನೂ ಅವರು ಊರಲ್ಲಿ ಬಾಳುವುದಕ್ಕೇ ಆಸ್ಪದ ಕೊಡರು. ಅಂಥ ಪುಂಡರು.

ಹುಡುಗರು, ಪಾಪ, ಹುಟ್ಟಿದ ತಪ್ಪಿಗೆ, ಪಾಠಶಾಲೆ ಸೇರಿ, ಓದಿದ ತಪ್ಪಿಗೆ ಪಾಸಾಗಿ, ಪಾಸಾದ ತಪ್ಪಿಗೆ ಮುಂದಿನ ತರಗತಿಯಲ್ಲಿ ಮಂಡಿಸಿ, ಮಿಡ್ಲ್‌ಸ್ಕೂಲ್ ಮುಗಿದ ತಪ್ಪಿಗೆ, ಹೈಸ್ಕೂಲಿಗೆ ದಾಖಲಾದರು. ನೂರೆಂಟುಮಂದಿ.


ಆ ಹತ್ತೆಕ್ರೆ ಜಮೀನಲ್ಲೂ ತೆಂಗಿನಸಸಿ ನೆಟ್ಟರೆ, ಸಾವಿರಾರು ಮರಗಳು ಮೂರುವರ್ಷದೊಳಗೆ ಗೊನೆ ಬಿಡುತ್ತವೆ, ಲಕ್ಷಾಂತರ ರೂಪಾಯಿ ಉತ್ಪತ್ತಿ, ಪ್ರತಿಯೊಂದು ಕಾಯಲ್ಲೂ ಅರ್ಧಹೋಳು ಮೇಷ್ಟರುಗಳ ಸಂಬಳಕ್ಕೆ. ಅರ್ಧ ಸ್ಕೂಲು ಕಟ್ಟಡ, ಲೈಬ್ರರಿ, ಲಾಬರೇಟರಿ, ಇತ್ಯಾದಿಗಳಿಗೆ, ಅಂತ ತೀರ್ಮಾನಿಸಲಾಯಿತು.

ಹುಡುಗರು ಗುಳಿ ತೋಡುವುದು, ಮೇಷ್ಟರುಗಳು ಮಣ್ಣು ಹಾಕುವುದು, ಪ್ರಾರಂಭ! ಆದರೆ, ಅಷ್ಟರೊಳಗೆ ಊರಲ್ಲಿ ಪಾರ್ಟಿಬಿತ್ತು. ಪಟೇಲರ ಮಗನ

ಕೈಯಲ್ಲಿ ಗುದ್ದಲಿ ಕೊಟ್ಟ ತಪ್ಪಿಗೆ, ಹೆಡ್ಮೇಷ್ಟರಿಗೆ ಕತ್ತಲೆ ಏಟು! ಆ ಪಾರ್ಟಿ ಲೀಡರುಗಳ ಮಕ್ಕಳು ದುಡಿಯಲೇ ಇಲ್ಲ, ಎಂದು ಈ ಪಾರ್ಟಿಯವರ ಮೂಗರ್ಜಿ. ಅಂತೂ, ಹಳ್ಳದ ಕೆಲಸ ಮುಗಿಯಿತು. ಸಸಿಗಳಿಗೆ ನೀರು ಚಿಮುಕಿಸುವ ಕೆಲಸ ಉಳಿಯಿತು. ಲೆಕ್ಕ ತಪ್ಪುಮಾಡಿದರೆ, ಹುಡುಗ ಮೂವತ್ತು ಬಿಂದಿಗೆ ನೀರು ಹೊರಬೇಕು, ವಿಷಯ ಅಂತ ಬರೆದರೆ ನಲವತ್ತು ಬಿಂದಿಗೆ, ನಮಸ್ಕಾರ ಸಾರ್ ಎಂದು ಹೇಳದೆ ಬರೀ ನಮಸ್ಕಾರ ಎಂದರೆ ಐವತ್ತು, ಇತ್ಯಾದಿ ಪಟ್ಟಿ ಒಂದು ತಯಾರಾಯಿತು. ಹುಡುಗರಿಗೆ ಉತ್ಸಾಹ ಕಡಿಮೆ ಆಯಿತು. ತಂದೆತಾಯಿಗಳು, 'ಕಂಡವರ ತೋಟ ಮಾಡುವುದಕ್ಕಿಂತ ನಮ್ಮ ತೋಟಕ್ಕೇ ನೀರು ಹಾಕೋ,' ಎಂದು ಹೇಳಿ, ಬಿಡಿಸಿದರು. ಎಂಟು ಹುಡುಗರಿಗೆ ದಿಕ್ಕೇ ಇರಲಿಲ್ಲ.

ಮೂರುವರ್ಷಕಾದು, ಕಾಯಿ ಎಣಿಸಿದಾಗ, ಕೋತಿ ಕಿತ್ತದ್ದು ಜಾತಾ,........ ಮೇಷ್ಟರುಗಳಿಗೆ ಮೂವತ್ತಾರು ತಿಂಗಳ ಸಂಬಳದ ಬಾಕಿಹಣದ ಬಾಬ್ತು, ಒಂದೊಂದು ಕರಟ........ಗುಡಿ, ಮಂಟಪ ಹಾಗೆಯೇ ಇವೆ, ಇನ್ನೂ ಗೋಡೌನ್ ಮೊನ್ನೆ ಕುಸಿದುಬಿತ್ತು.

—ಕಾಮತ್.



ನೆಹ್ರೂ ಅವರ ಜಪಾನ ರಷ್ಯಾದಿಂದ ತಂದ ಸಿಗರೇಟು ಸಾರ್,
ಬಲು ಪಸಂದು ರೂಪಾಯಿಗೆ ಒಂದು ಪ್ಯಾಕೆಟ್ ಸಾರ್!

ಅಣುಶಾಂತಿ!

" ಆ ಅಣುಗಳ ಸರಪಣಿ ಕಡೆಕಡೆಗೆ ಸಿಡಿದಿದ್ದು ನೋಡಿದಾಗ ನನಿಗೆ ಮೈ ಜುಂ ಎಂದಿತು ಕಣೆ "

" ಅಣುಬಾಂಬು ಸಿಡಿದಾಗ; ಅದು ಇನ್ನೆಷ್ಟು ಪ್ರಕಾಶಮಾನವಾಗಿರುತ್ತೋ "

" ಅಮೇರಿಕಾ ದೇಶದಲ್ಲಿ ಅಲ್ಲಿನ ವಿಜ್ಞಾನಿಗಳು ಪ್ರಯೋಗಾರ್ಥವಾಗಿ ಆಗಾಗ್ಗೆ ಅಣುಬಾಂಬು ಸಿಡಿಸುತ್ತಾರಲ್ಲ. ಅದು ಸಿಡಿದಾಗ ಕೋಟಿಸೂರ್ಯರಷ್ಟು ಪ್ರಕಾಶ ಬೀರಿತು ಅಂತ ಪೇಪರುಗಳಲ್ಲಿ ಬಂದಿತ್ತಲ್ಲ .. ಓದಲಿಲ್ಲವೇನೆ? "

" ಅದೇನು ಪ್ರಕಾಶವೋ .... ಲೇ, ಲೀಲ....ಅಂದಹಾಗೆ ಆ ' ನ್ಯೂಕ್ಲಿಯರ್ ಚೈನ್ ಬೋರ್ಡ್ ' ಹತ್ತಿರ ನಿಂತುಕೊಂಡು ಅದರ ವಿವರ ಕೊಡುತ್ತಿದ್ದಳಲ್ಲ ಅವಳ ಓಲೆ ನೋಡಿದೆಯೇನೆ! ಅದೆಷ್ಟು ಪ್ರಕಾಶ ಬೀರುತ್ತಿತ್ತು ! "

" ಯುರೇನಿಯಂನಿಂದ ಮಾಡಿಸಿಕೊಂಡಿದ್ದಳೋ ಏನೋ "

" ರೇಡಿಯಂ ಮುಲಾಮು ಮಾಡಿಸಿರಬೇಕು ಕಣೆ! "

" ಇನ್ನು ಈ ಮುತ್ತು, ಹವಳ, ವಜ್ರಗಳನ್ನ ಯಾರು ಕೇಳ್ತಾರೋ .... ಕಾಸಿಗೆ ಮೂರು ವಜ್ರ ಮಾರೋ ಕಾಲ ಬರುತ್ತೆ, ಅಂತ ನನ್ನ ಊಹೆ "

" ಅನುಮಾನ ಏಕೆ? ಕೃತಕ ವಜ್ರಗಳನ್ನ ಆಗಲೇ ವಿಜ್ಞಾನಿಗಳು ತಯಾರಿಸುತ್ತಿದಾರಲ್ಲ....ಇನ್ನು ಮೂರು ತಿಂಗಳಿಗೆ ನಮ್ಮೂರಿಗೂ ಒಂದು ' ಡೈಮಂಡ್ ಪ್ಲಾಂಟ್ ' ಬಂದೇ ಬರುತ್ತೆ ! "

" ಆಗ ನೋಡು, ಮೂರಾಣಿಗೆಲ್ಲ ಒಂದು ವಜ್ರದ ಬೆಂಡೋಲೆ ಸಿಗುತ್ತೆ "

" ಬರೀ ಡೈಮಂಡ್ ಸಾಲದಮ್ಮ....ಅದರೊಳಕ್ಕೆ ಮೆಲ್ಲಗೆ ಒಂದು ' ರೇಡಿಯೊ ಅಯೊಡಿನ್ ಐಸೋಟೋಪ್ ' ಸೇರಿಸಿ ಯಾವ ಕಿವಿ ಒಡಕು, ಅಪಸ್ವರ ಕೇಳಿಸುತ್ತೆ ಅನ್ನೋದನ್ನು ಪತ್ತೆಹಚ್ಚುವಂತಾದರೆ ಚೆನ್ನು! "

" ಅದೇನುಮಹಾ ! 'ರೇಡಿಯೋ ಆಕ್ಟಿವಿಟಿ' ಗುರುತಿಸೋ ಯಂತ್ರಾನೂ ಕಂಡುಹಿಡಿದಿದಾರಲ್ಲ........ತೋರಿಸಲಿಲ್ಲವೇನೆ? ಆ ಯಂತ್ರಾನ ಮೈಗೆ ತಗುಲಿಸಿದರೆ ಸಾಕು ' ರೇಡಿಯೋ ಆಕ್ಟಿವಿಟಿ' ಎಷ್ಟಿದೆ ಎಂಬುದು ಗೊತ್ತಾಗುತ್ತೆ "

" ಲೇ ಲೀಲ! ಆ ಯಂತ್ರಾನ ನಮ್ಮ ಪಾಲಿಟಿಕ್ಸ್ ಲೆಕ್ಚರರ್ ಇದ್ದಾಳಲ್ಲ.... ಸೋನುಬಾಯಿ....ಅವಳ ಮೈಗೆ ತಗುಲಿಸಿ ಅವಳ ' ರೇಡಿಯೋ ಆಕ್ಟಿವಿಟಿ ' ಅಳೆಯ ಬೇಕಲ್ಲೆ ! "

" ಸಾಕು ಸುಮ್ಮನಿರೆ .. ನಿಮ್ಮನೆ ರೇಡಿಯೋ ಆಕ್ಟಿವಿಟೀನ ಪಕ್ಕದ ಮನೆಯವರು ಅಳೆದು ನಿಲ್ಲಿಸಿಯಾರು ! "

" ನಿಜಕ್ಕು ಆಟಂಬಾಬು ಕಂಡುಹಿಡಿದದ್ದು ಒಳ್ಳೇದಾಯ್ತು ಕಣೆ."

" ಅಲ್ಲೇ ನೋಡು ಈ ಜಗತ್ತಿನ ಮೂಲತತ್ವ ಹುದುಗಿರೋದು— ಮೊದಲು ಲಯ, ಆಮೇಲೆ ಸೃಷ್ಟಿ! "

" ತೆಗೆದಳಪ್ಪ ಮೂಲರಾಗಾನ! ಫಿಲಾಸಫೀಗೂ ಬಂತು ಅಂತ್ಯ! "

" ನಿನ್ನ ತಲೆ! ' ಅಟಾಮಿಕ್ ಮೆನ್ಯೂರ್ಸ್ ' ಹಾಕಿದಮೇಲೆ ಹತ್ತು ಕಡಲೆಕಾಯಿ ಬಿಡುತ್ತಿದ್ದ ಗಿಡ ಸಾವಿರ ಕಡಲೆಕಾಯಿ ಬಿಟ್ಟಿದ್ದು—ಕಿರುಬೆರಳುಗಾತ್ರದ ಕಬ್ಬು ತೊಡೆ ಗಾತ್ರ ಆದದ್ದು....ಆ ಚಿತ್ರಗಳನ್ನೆಲ್ಲ ನೋಡಿದೆಯೋ ಇಲ್ಲವೋ "

" ಯಾವುದೇ ಅದು "

" ಥೂ ನಿನ್ನ! ಆ ಪಂಜಾಬಿ ಹುಡುಗಿ ವಿವರಿಸಿದಳಲ್ಲ ಆ ಭಾಗ ! "

" ಹೌದೆ! ಜ್ಞಾಪಕಕ್ಕೆ ಬಂತು. ಆದರೆ ಒಂದು ಸೋಜಿಗ ಕಣಮ್ಮ....ನನಗೆ ಆ ಬೆಳೆದು ನಿಂತಿದ್ದ ಕಬ್ಬಿನ ಚಿತ್ರಕ್ಕಿಂತ, ಹೆಚ್ಚಾಗಿ ಆ ಹುಡುಗಿ ಜಡೇನ ನೋಡಿದಾಗ ಆಶ್ಚರ್ಯವಾಯ್ತು ಲೀಲ ! "

" ಅದೇನೆ ಅಂಥ ಸೋಜಿಗ "

" ಅಬ್ಬ .. ಎಷ್ಟು ಸೊಂಪಾಗಿ ಬೆಳಿದಿತ್ತೆ ಕೂದಲು ! "

" ನಿನಗೆ ಅಸೂಯೆ ಹುಟ್ಟಿತೇನೋ ? "

" ' Radio active isotopes ' ಸೇರಿರೋ ಹೇರ್ ಆಯಿಲ್‌ಗಳು ನಮಗೆ ಸಿಗೋಕೆ ಎಷ್ಟು ಕಾಲ ಬೇಕು ಅಂತ ! "

" ಸಧ್ಯ ನಿನಗೂ ಶಾಂತಿ ಸಿಗುತ್ತಲ್ಲ ಆಗ ! "

" ಅಂತೂ ಈ ಅಟಾಮಿಕ್ ಯುಗದಲ್ಲಿ ಏನೇನು ಸೋಜಿಗ ನೋಡಬೇಕೋ ಆ ಪರಶಿವನಿಗೇ ಪ್ರೀತಿ "

" ಲೇ, ನೀನು ಪರಮೇಶ್ವರನ ಧ್ಯಾನಮಾಡುತ್ತಲು ನನಗೆ ಒಂದು ಐಡಿಯ ಹೊಳೀತು. ಆ ಸಾಕ್ಷಾತ್ ಪರಶಿವನಿಗೆ ಮೂರನೆಕಣ್ಣು ಹಣೆಯಮೇಲೆ ಇದೆಯಂತಲ್ಲ! ಆ ಮೂರನೆಕಣ್ಣು ' ಅಟಾಮಿಕ್ ಐ ' ಇರಬೇಕು, ಏನಂತೀಯ? "

" ಆ ಮಾತು ಈಗ್ಯಾಕೆ? "

" ಅಲ್ಲವೆ! ಈಶ್ವರ ಆ ಮೂರನೆಕಣ್ಣು ತೆರೆದಾಗ ಅಟಾಮಿಕ್ ಶಕ್ತಿಯುಳ್ಳಂತಹ ಕಿರಣಗಳು ಮನ್ಮಥನಮೇಲೆ ಬಿದ್ದು ಅವನು ಸುಟ್ಟು ಬೂದಿಯಾದದ್ದು–ಅನಂತರ ರತಿ ಬೋಲೋ ಬೋಲೋ ಮಾಡಿದ್ದು... at least pictureನಲ್ಲಿ ನೋಡಿಲ್ಲವೇನೆ?"

" ನೋಡಿದೇನೆ . ಅದಕ್ಕೇ ..."

" ಕೈಲಾಸಕ್ಕೆ ಒಂದು scientists expedition ಕಳಿಸಿ ಪರಮೇಶ್ವರನ ಹಣೆಗಣ್ಣಿನಲ್ಲಿ ಯುರೇನಿಯಂ ಡಿಪಾಸಿಟ್ಸ್ ಎಷ್ಟಿದೆ ಎಂಬುದನ್ನು ಪತ್ತೆಹಚ್ಚಬೇಕು!"

" ಅದಕ್ಕೆ ನಿನ್ನನ್ನೇ ಲೀಡರ್ ಮಾಡೋಣವಂತೆ........ಈ ಸಾರಿಯಾದರೂ ಥರ್ಡ್‌ಫಾರ್ಮ್ ಪೂರ್ತಿಮಾಡು, ಮಗಳೆ!"

" ಥೂ....ನಿನ್ನ ಜಂಭಕ್ಕೆ ಒಂದಿಷ್ಟು...."

" Cobalt 60 ಹಾಕ!....ಅಂತಳೆ?"

" ಆಗ ಏನಾಗುತ್ತೆ? "

" ಜಂಭದ ಕ್ಯಾನ್ಸರ್ ಗುಣವಾಗುತ್ತೆ! "

" ಏನು ಬ್ರೈನೆ ನಿಂದು ! "

" ಅಷ್ಟೇ ಅಲ್ಲವೆ .. ಇನ್ನುಮುಂದೆ ಮದುವೆ ಗೊತ್ತುಮಾಡೋದು ಆಸ್ಪತ್ರೇಲಿ!"

" ಏನು? ಗಂಡು ಹೆಣ್ಣು ಮದುವೆ ನಿಶ್ಚಯಿಸಿಕೊಳ್ಳೋದು ಆಸ್ಪತ್ರೇಲೆ? ಅವ ಲಕ್ಷಣದ ಮಾತೆ ಯಾವಾಗಲೂ....ಥೂ, ನಿನ್ನ ಬಾಯಿಗೆ...."

" ....ಐಸ್‌ಕ್ರೀಮ್...."

" NO....ISOTOPE...."

" ಹಾಗೆ ಆಗಲಿ. ಅದರಿಂದಲೂ ಉಪಯೋಗ ಇದೆ, ಏನು ಹೇಳೆ ನೋಡೋಣ"

" ಅದೆ! ಆ ಶಿಲಾಬಾಲಿಕೆ explain ಮಾಡಿದಳಲ್ಲ....ಒಂದು 'ರೇಡಿಯೋ ಆಕ್ಟೀವ್ ಐಸ್ಟೋಪ್', 'ಅಟೋಮ್ಯಾಟಿಕ್ ಕಂಟ್ರೋಲ್' ಕೆಲಸವನ್ನು ಹೇಗೆ ನಿರ್ವಹಿಸುತ್ತೆ ಎಂಬೋದನ್ನ"

" ಯಾವುದೇ ಅದು....ಮರತೇಹೋಗಿದೆ "

" ಸರಿ; ನಿನಗೆ ಹೇಗೆ ಜ್ಞಾಪಕಮಾಡೋದೊ....ಹು! ರಬ್ಬರ್‌ಬಳೆ ರೇಯಾನ್ ಲಂಗ ! "

" ಈಗ ಹೊಳೀತು ಕಣೆ........ಅಂದಹಾಗೆ ನೀನು ರೇಯಾನ್ ಎನ್ನುತ್ತಲು ಇನ್ನೊಂದು ವಿಷಯ ಜ್ಞಾಪಕಕ್ಕೆ ಬಂತು .. ....ಈ ರೇಯಾನ್ ಬಟ್ಟೆಗಳನ್ನ ತೊಟ್ಟು ಬೀದೀಲಿ ತಿರುಗಾಡೋದು ಬಲು ಅಪಾಯವಂತೆ ಕಣೆ ! "

" ಅರೆಸ್ಟ್ ಮಾಡ್ತಾರೇನು "

" ಅರೆಸ್ಟ್ ಮಾಡುಲ್ಲ...... ಇದ್ದಕ್ಕಿದ್ದಹಾಗೆ ತೊಟ್ಟ ಬಟ್ಟೇನೇ ಮಾಯವಾಗಿ ಹೋಗುತ್ತಂತೆ!"

" ಇದು ಯಾವ ಮಹಾತ್ಮನ ಸಂಶೋಧನೆಯಮ್ಮ... !"

" ಗಾಳಿಯಲ್ಲಿ ಗಂಧಕದ ಅನಿಲ ಇದ್ದರೆ ಅದು ರೇಯಾನ್‌ಮೇಲೆ ಪ್ರತಿಕ್ರಿಯೆ ಹೊಂದಿ ಬಟ್ಟೆಯನ್ನೆಲ್ಲ ಬೂದಿಮಾಡುತ್ತಂತೆ ಕಣೆ!"

" ಏನು ಕಾಲ ಬಂತಮ್ಮ....ನೇಚರ್ರೇ ವಸ್ತ್ರಾಪಹರಣಕ್ಕೆ ನಿಂತರೆ!"

" ಇದು ದುಶ್ಶಾಸನನಿಗಾದರೂ ಗೊತ್ತಿದ್ದಿದ್ದರೆ ಅವನು ಒರಟು ಒರಟಾಗಿ ಸಭೇಲಿ ದ್ರೌಪದಿ ಸೀರೇನ ಸೆಳೆದು ನಮ್ಮ ಕವಿಗಳ ಆಗ್ರಹಕ್ಕೆ ತುತ್ತಾಗಬೇಕಾದ ಪ್ರಮೇಯವೇ ಬರುತ್ತಿರಲಿಲ್ಲ!"

" ಏನೆ ಇದರರ್ಥ?"

" ತುಂಬ ಸಿಂಪಲ್ಲು! ಅತ್ತಿಗೆಗೆ ಉಡುಗೆರೆ ಅಂತ ಸೊಗಸಾದ ಒಂದು ರೇಯಾನ್ ಸೀರೆ, ಒಂದು ಚೋಳಿ ಕಳಿಸಿಕೊಟ್ಟಿದ್ದರೆ ದ್ರೌಪದೀಗೆ ಖುಷಿಯಾಗಿ, ಡ್ರೆಸ್ ಮಾಡಿ ಕೊಂಡು ಸಭೆಗೆ ಬರುತ್ತಿದ್ದಳು. ಆ ಹೊತ್ತಿಗೆ ಗಂಧಕದ ಅನಿಲವನ್ನು ಶೇಖರಿಸಿಟ್ಟು ಕೊಂಡು, ಪನ್ನೀರು ಎರಚುವ ನೆಪದಲ್ಲಿ ಬಟ್ಟೆಮೇಲೆ...."

" ವಸ್ತ್ರದಾನಕ್ಕೆ ಶ್ರೀಕೃಷ್ಣಪರಮಾತ್ಮ ಇದ್ದೇ ಇದ್ದನಲ್ಲ"

" ಆ ದೇವರೇ ಈಗಲೂ ಮಾನ ಕಾಪಾಡುತ್ತಾನೆ ಬಿಡು, ಆದರೆ ಒಂದು ಗುಟ್ಟಿನ ವಿಷಯ— ನಾವು ಬಟ್ಟೆಬರೆ ತೊಟ್ಟುಕೊಂಡು ಬೀದೀಲಿ ಹೋಗೋದನ್ನ ಕಲಿ ಬೇಕು ರಾಣಿ"

" ಬಾಯಿಮುಚ್ಚೆ........ಅರವತ್ತರ ಅಜ್ಜಿ, ಇಪ್ಪತ್ತೆರಡುವರ್ಷದ ಕರಿಸೊಸೇಗೆ ಬುದ್ಧಿ ಹೇಳುವಹಾಗೆ ಮಾತು ಕೊನೆಮುಟ್ಟಿಸಿದೆಯಲ್ಲ! ನಿನಗೇನು ನಾಚಿಕೆ ಇಲ್ವೊ, ಸೆರಗನ್ನ ಸರಿಯಾಗಿ ಹೊದ್ದಿಕೊ"

" ಎಲ್ಲಿಂದ ಎಲ್ಲಿಗೆ ನಿನ್ನ ಹಾಳುಮಾತು ...... 'Automatic control' ಚಿತ್ರನ ಜ್ಞಾಪಿಸಿದೆಯಲ್ಲ, ಅದರ ವಿವರಣೆ ಸ್ವಲ್ಪ ಹೇಳೆ"

" ಅದೆಕಣೆ, ರೇಡಿಯೋ ಆಕ್ಟೀವ್ ಐಸೋಟೋಪನ್ನ ಎಣ್ಣೆ ಹರಿಯುವ ನಾಳದಲ್ಲಿ ಬಿಟ್ಟು; ಎಣ್ಣೆ ಯಾವಕಡೆ ಹರಿಯಬೇಕೋ ಆ ಕಡೆ ಹೋಗೋಹಾಗೆ ಮಾಡಬಹುದು —ಚಿತ್ರದಲ್ಲಿ ಚನ್ನಾಗಿ ತೋರಿಸಿದ್ದರಲ್ಲೆ ಅದನ್ನು"

" ಹೌದು. ಅದನ್ನು ವಿವರಿಸಿ ಹೇಳಿದ ಹುಡುಗಿ ಜ್ಞಾಪಕ ಈಗ ಬಂತು.... ಅವಳೂ ಒಂದು ಆಟೋಮ್ಯಾಟಿಕ್ ಯಂತ್ರವೇ ಕಣೆ — ಎಡಗಡೆ ಚಿತ್ರದ ವಿವರಣೆ ಕೊಟ್ಟತಕ್ಷಣ ಬಲಗಡೆ ಇದ್ದ ಚಿತ್ರದ ವಿವರಣೆ; ಬಲಗಡೆ ಆದಮೇಲೆ ಮತ್ತೆ ಎಡಗಡೆ

ಒಂದಕ್ಷರಾನೂ ತಪ್ಪದೆ, ಬದಲಾಯಿಸದೆ ಗಿಳಿಪಾಠದಹಾಗೆ ಬಂದವರಿಗೆಲ್ಲ ಒಪ್ಪಿಸಿ ಬಿಡುತ್ತಿದ್ದಳಲ್ಲ!"

"ಯಂತ್ರವೇ ನಿಜ ಅನ್ನು .... ಪ್ರದರ್ಶನದ ವ್ಯವಸ್ಥಾಪಕರು ಅವಳ ಬಾಯಲ್ಲಿ ಒಂದು....ಐಸ್ಕ್ರೋಪ್ ಹಾಕಿ ನಿಲ್ಲಿಸಿದ್ದರು ಅಂತ ಕಾಣುತ್ತೆ!"

"ಏನು ಮೆದುಳೆ ನಿಂದು! .... ಅದೇನೋ ಇನ್ನುಮುಂದೆ ಆಸ್ಪತ್ರೇಲೇ ಲಗ್ನ ಕಟ್ಟೋದು ಅಂತ ಬೇರೆ ಹೇಳಿದೆಯಲ್ಲ. ಅದರ ಮರ್ಮ ಏನು?"

"ಗಂಡು ಹೆಣ್ಣು—ಇಬ್ಬರಲ್ಲೂ ಪರಸ್ಪರ ಅನ್ಯೋನ್ಯ ಪ್ರೀತಿ ಇದ್ದರೆ ಅಲ್ಲವೇನೆ ಆ ಸಂಸಾರ ಮುಂದೆ ಸುಖವಾಗಿ ಬಾಳೋದು"

"ಯಾರಿಲ್ಲ ಅಂದರು"

"ಅದನ್ನು ಇನ್ನುಮುಂದೆ ಲ್ಯಾಬರೇಟರಿಯಲ್ಲಿ ಕಂಡುಹಿಡಿಯಲು ಸಾಧ್ಯ ಅಂತ ನಾನು ಹೇಳೋದು"

"ಹೇಗಮ್ಮ ಅದು"

"ಇಬ್ಬರ ಹೃದಯಗಳನ್ನು ಶೋಧಿಸೋದು. ರೇಡಿಯೋ cobalt ಕಿರಣಗಳು ಬಹಳ ಆಳಕ್ಕೆ ಹೋಗುತ್ತಂತಲ್ಲ!........ಹೃದಯಾಂತರಾಳಕ್ಕೆ ಕಿರಣಗಳನ್ನು ಬಿಟ್ಟು ಫೋಟೋ ತೆಗೆದುಕೊಳ್ಳೋದು. ಅವನ ಹೃದಯಾಂತರಾಳದಲ್ಲಿ ಇವಳ ಪ್ರತಿಬಿಂಬ; ಇವನ ಎದೆಗೂಡಿನಲ್ಲಿ ಅವಳ ಪ್ರತಿಬಿಂಬ ಮೂಡಿಬಂದಿದ್ದರೆ; ಫೋಟೋಗಳನ್ನು ಪರೀಕ್ಷಿಸಿ ಸರ್ಟಿಫಿಕೇಟ್ ಕೊಡೋದು....ಅನಂತರ ಮದುವೆ....!"

* * *

"ಮಾಡಿಕೊಳ್ಳುವೆಯಂತೆ, ಯಾರು ಬೇಡ ಅಂದ್ರು....ಥರ್ಡ್‌ಪಾರ್ಟು ಈ ಸಲ ವಾದ್ರೂ ಪಾಸ್‌ಮಾಡೇ ತಾಯಿ, ಸಾಕು ಹರಟೆ, ಎದ್ದು ಓದಿಕೋ" ಅಂತ ಬಿ.ಎಸ್.ಸಿ, ಮಗಳಿಗೆ ರೂಮಿನಿಂದಲೇ ಒಂದು ಕೂಗು ಹಾಕಿದೆ. "ಆಟಂಸ್ ಫಾರ್ ಪೀಸ್" ಎಕ್ಸಿಬಿಷನ್‌ಗೆ ಹೋಗಿ ಬಾ ಎಂದು ನಾನೇ ಕಳಿಸಿದ್ದೆ ಅನ್ನಿ. ಮುಖ ಕೆಂಪಗೆ ಮಾಡಿಕೊಂಡು ಲೀಲು ಗೆಳತಿಯರನ್ನ ಸಾಗುಹಾಕಿ ಪುಸ್ತಕದ ಮುಂದೆ ಕುಳಿತುಕೊಂಡಳು. ಆಗಲೇ ಸಂಧ್ಯಾಕಾಲ ಮೀರಿ ಗಂಡನಿಗೆ ಮನೆಯಾಕೆಯಿಂದ ಅಷ್ಟೋತ್ತರ ಪ್ರಾರಂಭವಾಗುವಕಾಲ ಸನ್ನಿಹಿತವಾಗಿತ್ತು. ಅದೇಹೊತ್ತಿಗೆ ಅಡಿಗೆ ಮನೆಯಲ್ಲಿ ಹೆಂಡತಿ ಸಿಡಿಯುತ್ತಿದ್ದಳು!....ಅಯ್ಯೋ! ಅಂದಹಾಗೆ....ಅಣು ಸಿಡಿದಾಗ ಉತ್ಪತ್ತಿಯಾಗುವ ಶಕ್ತಿಯನ್ನು, ಮನುಷ್ಯನ ಜೀವನವನ್ನು ಸುಖಮಯವಮಾಡಲು ಉಪಯೋಗಿಸುತ್ತಾರಂತಲ್ಲ—ವಿಶ್ವಶಾಂತಿ ಸ್ಥಾಪಿಸುತ್ತಾರಂತಲ್ಲ; ಹಾಗೇನೇ ಮನೆಯ ಹೆಂಡತಿ ಸಿಡಿದಾಗ, ಆ ಶಕ್ತಿಯನ್ನು ಯಾರಾದರೂ ವಿಜ್ಞಾನಿಗಳು ಶೇಖರಿಸಿ........ ಶಾಂತಿಗೋಸ್ಕರ ....!

— ಹಾ. ರಾ.

ಅನರ್ಥಕೋಶ-ಇನ್ನೊಂದಿಷ್ಟು

ಅವಿವಾಹಿತ : ಹೆಂಗಸೊಬ್ಬಳ ಕಾಡಿಸುವ ಸದವಕಾಶವನ್ನು ಕಳೆದುಕೊಳ್ಳುವ.

ಉಪನ್ಯಾಸ : ಕರ್ಣಕುಠಾರ; ತಮ್ಮ ವಾಗ್ವೈಖರಿಯನ್ನು ತಾವೇ ಕೇಳಿ ಆನಂದಿಸಲು ಹಲವರು ಹೂಡುವ ಪಿತೂರಿ.

ಕೂಸು : ಉದರ ನಿಮಿತ್ತಂ ಬಹುಕೃತ ರೋಷಂ.

ಗೊರಕೆ : ಆತ್ಮಾನಂದ; ಇತರರಿಗೆ ಹಿಂಸೆ, ಆದ್ದರಿಂದ, ಇನ್ನೂ ಹೆಚ್ಚು. ಆನಂದ.

ಚಲಚ್ಚಿತ್ರ : ಸ್ವತಂತ್ರಭಾರತದ ಬಾಲಕ ಬಾಲಕಿಯರ ಏಕಮಾತ್ರ ಶಿಕ್ಷಣ ಕೇಂದ್ರ.

ಛೀಮಾರಿ : ನಮ್ಮ ದೇಶದ ಸಾಮಾನ್ಯ ಜನರು ಹೆಚ್ಚು ಪೂಜಿಸಬೇಕಾದ ದೇವತೆ.

ಜನನ : ಪ್ರಾರಂಭೋತ್ಸವ.

ಜೋಬುಕತ್ತರಿ: ಒಂದು ರೀತಿಯ ಶಸ್ತ್ರ ಶಾಸ್ತ್ರ.

ಡಿಗ್ರೀದಾರ : ಚರಂಡಿ ತೋಡುವುದರಲ್ಲಿ ಪ್ರವೀಣ.

ಮನಸ್ಸಾಕ್ಷಿ : ನಮ್ಮನ್ನು ಇನ್ನೂ ಸಣ್ಣಮಾಡುವ ಸಣ್ಣ ಒಳದನಿ.

ಮರ್ಯಾದೆ : ಬಾಯಿ ಮುಚ್ಚಿಕೊಂಡೇ ಆಕಳಿಸುವ ಸ್ವಭಾವ.

ರೋಗಿ : ಜಾಹಿರಾತು ಔಷಧಿಗಳನ್ನು ನಂಬಿ ಸೇವಿಸುವವ; ನರಳುವುದರಲ್ಲೇ ಸುಖವನ್ನು ಕಾಣುವವ.

ವ್ಯಾಯಾಮ : ಇನ್ನೊಂದು ಲಾಡು ಹಾಕಲೆ, ಎಂದು ಕೇಳಿದಾಗ, ತಲೆ ಅಲ್ಲಾಡಿಸುವುದೇ ಉತ್ತಮ ವ್ಯಾಯಾಮ.

ಹೊಟ್ಟೆನೋವು: ತುಂಬಿದ ಹೊಟ್ಟೆಯ ಪಶ್ಚಾತ್ತಾಪ.

—ಖಾರಾಂತ.

ಪ್ರವಾಸ-ಪ್ರತಿ ಕ್ರಿಯೆ

ಷೀಲ್ಡ್ :— ಏನು ಸುದ್ದಿಯೋ ? ನೆಹರು ವೆದ್ದಿರಿ
ದೇನು ಮಾಸ್ಕೋ ಕಲ್ಲಲೇ ತಾ
ನೇನು ಮನದಂಘವಣೆ ಬಯಸಿದಿರೇಕೆ ಕರಡಿಯನು ?
ವೈನತೇಯನ ತೆರದ ಯಾಂಕಿಗ
ಳೂನವಾದರು ರಷ್ಯ ಹಾವಿಗಿ
ದೇನು ನಿಮುತ್ಸಾಹವೆಂದನು ನಗುತ ಹ್ಯಾಮರ್ ಷೀಲ್ಡ್.

ಐಕ್-ಡಲೆಸ್ :— ಈ ಕೊಟೆಲನೀ ಚಂಗನೀ ಟೋ
ನೀ ಕೊನ್ರೇಡಿನ ಮನೆಯು ಹೊಗದವಿ
ವೇಕಿ ಕ್ರೆಮ್ಲಿನ ಭವನದಲಿ ಸೀಕರಣೆ ತಿಂದಿರಲ್ಲೆ.
ಸಾಕಿದವನರೆಹೊಟ್ಟೆ ಗಾಂಧಿಯು
ಕಾಕ ಬಳಸಲು ಸಲ್ಲದೈ ನಿಮ
ಗೇಕೆ ರಾಯರ ನೀತಿಯೆಂದರು ಐಕ-ಡಲ್ಲೆಸರು.

ಟೈಂಸ್ :— ಬಾಯಿ ನೋಯುವನಕ ಭಾರತ ಬೈದೆನು
ಹೋಯೆಂಮ ಲೋಕವೆ ಹೊಗಳುವುದಲ್ಲ.
ಯಾರಿಗೆ ಯಾರುಂಟು ಭಾರತ-ರಷ್ಯಾ
ನೀರ ಮೇಲಣ ಗುಳ್ಳೆಯಾಯ್ತೆನ್ನ ಭಾಷ್ಯಾ.

ಡೈಲಿ ಮಿರರ್ :— ಪೆರರನೆ ಪೊಗಳ್ದಪೆ ನೆಹರುವ
ಕಿರಿಯನ ಮಾಡಿದಪೆ ಎಲವೊ ಬೀವರ ಬ್ರೂಕಾ
ಪೆರನೋರ್ವಂ ಸ್ತುತಿಸ್ಜೋಮಂ
ಪೆರನೋರ್ವಂ ಸಾಲ ಜಾರನಾಗಲ್ಬಗೆವೋ.

ಬುಲ್ಗನಿನ್ :— ಮಾವಿನಹಣ್ಣು ಜೇಬಿನ ಬುಡದಲಿ
ನಿಂಬೆಯ ಪಾನಕ ಪೋಡ್ಕದ ಬದಲು
ಸಾರಿನ ಕೊಳಗ ತಟ್ಟೆಯ ಬದಿಗೆ
ಪಂಚಶೀಲಗಳ ಹಂಚುತ ಸುತ್ತಾ
ಬಂದ ಬಂದ ಸಣ್ಣಮ್ಮಣ್ಣ.

ಟಿಟೋ :— ಬಾರೋ ಬಾರೋ ಗಾಂಧಿಯ ಮರಿಯೇ
ಕೋಮಿನ ಫಾರ್ಮಿಗೆ ಸುಂಟರ ಗಾಳಿ.
ತೋರೋ ಸಿರಿಮೊಗ ಆವಡಿ ಗುರುವೇ
ಬಂದ ಬಂದ ಸಣ್ಣಮ್ಮಣ್ಣ.

ಮೇಳ :— ಬಂದ ಬಂದ ಸಣ್ಣಮ್ಮಣ್ಣ.
ಬಕ್ಕ ತಲೆಗೆ ಬಿಳಿ ಗಾಂಧಿ ಟೋಪಿ
ಮಾಸ್ಕೊ, ಕ್ರಿಮಿಯ, ಸಾಮರ್ಕಂಡು
ಉಜ್ಬೆಕ ಜಾರ್ಜಿಯ ಆಫ್ರೋಲೆಂಡು
ಟಿಟೊರಾಬ್ ನಸೆರರ ನಾಡಿನಲುಂಡು
ನಮ್ಮಲ್ಲಿಗೂ ಬಾ ಎಂತಿಂಗ್ಲೆಂಡು.
ಕಬ್ಬಿಣ ಪರದೆಗೆ ಹಿಡಿಯಿತು ತುಕ್ಕು
ಶಾಂತಿ ಬಂದಿತೇ? ಸಮರಕೆ ಬಿಕ್ಕು
ಹೋದೆಡೆಯೆಲ್ಲ ಪುಷ್ಪವೃಷ್ಟಿ
ಗೌರವ ಪೌರತೆ ಡಿನ್ನರು ಗೋಷ್ಠಿ
ಜಯ ಜಯಕಾರ ಪೂರ್ವದ ವೀರ.
ಇತ್ತಲೊ ಇಂಡ್ಯದಿ ಎರಡನೆ ಸಾಲ
ನೂರು ಕೋಟಿ ಹಳೆ ನಾಯಿಯ ಬಾಲ
ಲಂಚ ವಾರ್ಷಿಕಕೆ ಬಂದಿತು ಬೂಮು.
ಪ್ರಸವಾ ಪಕ್ಷದಿ ವೇದನೆ ಭಾರಿ
ಕಮ್ಯುನಿಷ್ಟರ ತಲೆಹೋಯಿತು ಮಾರಿ
ಗೋವಾಂತದಲಿ ಬಿದ್ದವೆರಡು ಹೆಣ
ಕಾಶ್ಮಿರ ಪ್ರಶ್ನೆಗೆ ಆಲಿ ಪ್ರಾಣ ಪಣ.
ಐ ಎ ಎಫ್ ಡ ಕೊಟಕೆ ಆಯಿತು ಡಿಕ್ಕಿ
ಬ್ಯಾಲದಹಳ್ಳಿಯ ಸೇತುವೆ ಮುರಿಯಿತು.

—ಅ. ರಾ. ಸೇ.

ಅಕವಿಪ್ರೇಪ

'ಮುಗಿಲುಹಳ್ಳಿಗೆ ಬನ್ನಿ' ಎಂದು ಯಾವ ಸಂಸ್ಥಾನ ಸರ್ಕಾರವೂ ಜಾಹಿರಾತು ಕೊಟ್ಟಿಲ್ಲ. ಆದರೂ ನನ್ನ ಮಾತು ಕೇಳಿ ಬನ್ನಿ, ಈ ದಿನವೇ. ನಾಳೆಯೆಂದರೆ ಹಾಳು. ಹವಾಮಾನ ಹಿತಕರವಾಗಿದೆ. ವಿಜಯಕೆಫೆಯ ಕಾಫಿ ಎಂದಿಗಿಂತಲೂ ನೂರ್ಮಡಿ ಅತ್ಯದ್ಭುತವಾಗಿದೆ. ಅಮೋಘವಾಗಿದೆ. ಮನೋಹರವಾಗಿದೆ. ಅಷ್ಟೇ ಅಲ್ಲ ಅಕವಿಪ್ರೇಪ'ದ ಅಂತರಂಗಾಧಿವೇಶನ ನಡೆಯುತ್ತಿದೆ. ಬನ್ನಿ! ಭಾಗವಹಿಸಿ!

ವಿಜಯಕೆಫೆಯ ಮೂರನೇ ಮಹಡಿಗೆ ಹೋಗಿರಿ. ಒಳಗಿರುವ ದುಂಡು ಮೇಜಿನ ಸುತ್ತಲೂ, ಕರುನಾಡಿನ, ಕವಿಪುಂಗವರು, ನಟಸಾರ್ವಭೌಮರು, ಮಂತ್ರಿಗಳು, ಕಾಲೇಜಿನ ಬೆಡಂಗ, ಬೆಡಂಗಿಯರು ಕುಳಿತಿರುತ್ತಾರೆ. ಕಾಫಿ ಕುಡಿವರಾರೋ, ಸಿಗರೇಟ ಸೇದುವರಾರೋ, ಕಕ್ಕರಗೊಳದ ಕಾಕಂಬಿ ಕಷಾಯ ಕುಡಿಯುವರಾರೋ; ಎಲೆಯಡಿಕೆ ಜಗಿವರಾರೋ. ಶಾಂತಿಯುತ ಸಹಜೀವನ; ಪಿಸುಮಾತು; ನಿಟ್ಟುಸಿರು; ಚಿಂತಮುಖ; ಅನಂತ ಸುಖ.

ಬಾಗಿಲಲ್ಲಿ ಆಳು ತಡೆಯುತ್ತಾನೆ. 'ಪ್ರವೇಶವಿಲ್ಲ' ಎಂಬ ಹಲಗೆ ತೋರಿಸುತ್ತಾನೆ. ಲಂಚದಿಂದಲೂ ಕೆಲಸವಾಗದು. 'ಅಕವಿಪ್ರೇಪ' ಎನ್ನಿ. ಒಳಗೆ ಹೋಗಿ.

ಮೆರವಣಿಗೆ, ಬಡಿದಾಟ, ಠರಾವು, ಟೀಕೆ ಟಿಪ್ಪಣಿ, ವಾಗ್ವಾದ, ಲೌಡ್‌ಸ್ಪೀಕರು, ಹತ್ತುವಳಿಗಳಿಲ್ಲದ ಇದೆಂಥ ಕೂಟ; ಅಧಿವೇಶನ ಎನ್ನಬೇಡಿ.

ಎಂದರೂ ಕೂಡ ನಾನು ಉತ್ತರ ಕೊಡಲಾರೆ. ಕಾದು ನೋಡಿ. ಮೂರು ನಾಲ್ಕು ತಿಂಗಳನಂತರ 'ಅಕವಿಪ್ರೇಪ'ದ 'ಯಾರು, ಏನು, ಏಕೆ, ಹೇಗೆ'ಯು ವಾರ್ಷಿಕ ಸಂಚಿಕೆ ಹೊರಬೀಳುವುದು. ಆಗ ಸದಸ್ಯರಾರೋ, ಸದಸ್ಯರ ಮಿತ್ರರೋ ಇದ ನಿಮಗೆ ರಹಸ್ಯಚ್ಛೇದವಾದೀತು. ಅಲ್ಲಿನವರೆಗೆ ನಿಮ್ಮ ಕುತೂಹಲ ಕೆರಳಿಯೇ ಇರಲಿ ಎಂದು ಈ ಚುರುಕು ಚೂರುಗಳನ್ನೊದಗಿಸುತ್ತೇನೆ.

'ಅಖಿಲ ಕರ್ಣಾಟಕ ವಿಫಲಪ್ರೇಮಿಜನ ಪರಿಷತ್ತು' ಎಂಬುದೇ ಅಕವಿಪ್ರೇಪದ ಪೂರ್ಣಪಾಠ. ನೀವೆಲ್ಲರೂ ಇದರ ಸದಸ್ಯರಾಗಲರ್ಹರು ಎಂದು ಮತ್ತೇಕೆ ಹೇಳಲಿ?

ಅದರಲ್ಲಿ ಭಾಗವಹಿಸಿದ ಕವಿರಾಜನೊಬ್ಬ ಹೇಳಿದನಂತೆ.

'ಅವಳನ್ನು ನೋಡಿದೆ. ಕಣ್ತುಂಬ ನೋಡಿದೆ. ನನ್ನ ಕಣ್ಣಿಗವಳು ಧೃವತಾರೆ ಯಂತಿದ್ದಳು. ಅವಳಿಗಾಗಿ ದಿನವೂ ಷೇವಿದೆ. ಇಸ್ತ್ರಿ ಬುಷ್‌ಕೋಟಿದೆ; ಹೇರಾ ಯಿಲಿದೆ. ಹಲ್ಗಿರಿದೆ. ಬೆನ್ನು ಹಿಂದಲೆದೆ. ಅವಳಿಗೆ ತಿಳಿಯಬಾರದೆ? ಒಳಮನದ ಕಳಮಳವನ್ನವಳಿಗೆ ತಿಳಿಹೇಳಿದೆ. ಅವಳೋ 'ಕವಿರಾಜ! ನೀನು ಶುಭ್ರಜೀವಿ.

ಹಳೆಯ ಶಿಲಾಯುಗದ ಸತ್ಯವಂತ. ನಾನು ಅಣುಯುಗದ ಅಣುಗಿ. ಆದುದರಿಂದ 'ಇಂದಿನಿಂದ ನನಗೂ ನಿನಗೂ ದೂರ' ಎಂದಳು. ಹೊರಟುಹೋದಳು. ಬೆಳಕನ್ನು ಕೊಂಡೊಯ್ದಳು. ಕತ್ತಲು ಕವಿದಿತು. ಸೂರ್ಯನು ಪರಾಂಬುಧಿಗೈದಿದನು. ತಿಂಗಳಿರುಳು ತಂಗಾಳಿ. ಹಾಸಿದೆ. ಹೊದಿದೆ. ನಿದ್ದೆ ಮುಗಿಸಿ ಎದ್ದೆ. ಹೃದಯವೊಡೆದಿತ್ತು. ಎನಗಂದು ಮನೆಶೂನ್ಯ ಮನಶೂನ್ಯ. ಫುಟ್ಪಾತೇ ನನ್ನ ಮಿತ್ರ. ದುಃಖಸಾಗರವನ್ನು ತ್ತರಿಸಲು ದೋಸೆಯೇ ಹಡಗಾಯಿತು. ಕಾಫಿ ಡೀಸೆಲಾಯಿಲಾಯಿತು. ಆಸ್ಕರ ವೈಲ್ಡನ ಹೆಂಡತಿ ನನ್ನ ಪತ್ನಿಯಾದಳು. ಟೊಬ್ಯಾಕೊ ಕಂಪನಿಯೇ ನನ್ನ ಶ್ವಶುರ ಗೃಹ"

ಒಬ್ಬ ವಿವಾಹಿತ ರಾಜಕಾರಣಿ ಹೇಳಿದನಂತೆ.

"ನಾನು ಪ್ರೀತಿಸಿದವಳನ್ನೇ ಮದುವೆಯಾದೆ. ರತಿಯಂತಹ ಹುಡುಗಿ; ರಥದ ಹಾಗೆ ಕೆಲಸಮಾಡುತ್ತಾಳೆ. ಆದರೆ? ಆದರೆ ನನ್ನ ವೈಯಕ್ತಿಕಜೀವನ ನರಕೋಪ ಮಯವಾಗಿದೆ. ಉಪ್ಪಿನಕಾಯಿ ಹಾಕು, ಅನ್ನ ಕಲೆಸಲು. ಎಣ್ಣೆ ಹಾಕು, ರುಚಿಗಾಗಿ ಎಂದರೆ, ನನ್ನವಳು, ನಾಲಿಗೆಯ ಚಪಲ ಬೇಡ. ಸಾರನ್ನ ಊಟಮಾಡಿ. ಎಣ್ಣೆ ಮೈಗೊಳ್ಳೆಯದಲ್ಲ. ತುಪ್ಪ ಹಾಕಿಸಿಕೊಳ್ಳಿ ಎನ್ನುತ್ತಾಳೆ. ಹಗಲೆಲ್ಲಾ ದುಡಿದ ನಾನು ಮನಸ್ಸಂತೋಷಪಡಿಸಿಕೊಳ್ಳಲೆಂದು ಓದಲು ತಂದ 'ಮೂರೂ ಬಿಟ್ಟ ಮಂಗ' 'ಕತ್ತೆ ಕುಡಿದ ಹತ್ತಿಕಾಳು ಮುಸುರೆ' 'ಮಾನವಿಲ್ಲದ ಮಹನೀಯರೂ ಮಹಿಳೆಯರೂ' 'ಸದ್ಗುಣವಂತೆ; ಆದರೆ ಸೂಳೆ!' ಎಂಬಿವೇ ಮೊದಲಾದ ಗ್ರಂಥಗಳನ್ನು ಒಲೆಗೆ ಹಾಕಿ, ಕಾಫಿಮಾಡಿ ತಂದುಕೊಟ್ಟು 'ಶ್ರೀಮದ್ಭಾಗವತವು; ವಚನವು' 'ಉಪನಿಷತ್ ಸೂಕ್ತಿ' ಎಂಬ ಗ್ರಂಥಗಳನ್ನೋದಲು ಹುಮ್ಮುಕ್ ಕೊಡುತ್ತಾಳೆ. ನನ್ನ ಭಾವದ ರಾಣಿಯು ಹಾವುರಾಣಿಯಂತೆ ಅಸಹನೀಯಳಾಗಿದ್ದಾಳೆ. ನೈಜಪ್ರೇಮವನ್ನು ಕಳೆದುಕೊಂಡೆನು ಮೇಲೆ ನಗುವುದೆ ಒಳಗೆ ಕಲ್ಲೆದೆಯಾದೆನು".

ಪ್ರೇಮಾನಂದರು ಹೀಗೆ ಹೇಳಿದರೆಂದು ವದಂತಿ.

"ನಾನು ನಾಲ್ಕಾರುಬಾರಿ ಪ್ರೇಮದಲ್ಲಿ ವಿಫಲನಾಗಿ ಕೊನೆಗೂ ಮದುವೆಯಾದೆ. ಸಫಲಪ್ರೇಮವು, ಅಯ್ಯೋ, ಎಂತಹ ದುರವಸ್ಥೆ. ಸಫಲಪ್ರೇಮವೇ ಲೋಕಕ್ಕೆ ದುಶ್ಶಾಪ. ವಿಫಲಪ್ರೇಮವೇ ಸ್ವರ್ಗ. ಭಗ್ನಪ್ರೇಮಿಯನ್ನು ಕಂಡು ಬ್ರಹ್ಮಾಂಡವೇ ಕನಿಕರಿಸುತ್ತದೆ. ಕೊರಳಿಗೆ ಉರುಳಾದ ಸಖಿಯೊಬ್ಬಳಿದ್ದರೆ ಆ ಸಾಮಿ ಕಂಡೆಮ್. ವಿಫಲಪ್ರೇಮಿಯು ತನ್ನಿನಿಯಳು ತನ್ನೊಡನಿದ್ದರೆ ತಾನು ಹಾರುಗುದುರೆ ಬೆನ್ನ ಏರಿ, ಸ್ವಾರನಾಗಿ ದೂರ ದೂರ ಹಾರುತ್ತಿದ್ದೆ ಎಂದು ಮನಸಿನ ಮಂಡಿಗೆ ತಿನ್ನುತ್ತಾನೆ. ಮದುವೆಯಾದರೆ, ಸೀರೆ, ರವಿಕೆ, ಸ್ನೋ, ಲೌಲಾಕು, ಮನೆ ಬಾಡಿಗೆ, ಅತ್ತೆ, ಮೈದುನ, ಸಂತಾನ ಶನಿಗಳು ಗಂಟುಬೀಳುತ್ತವೆ. ಅಂಟಿಕೊಳ್ಳುತ್ತವೆ. ಪ್ರೇಮ ಭಗ್ನವಾಗುವುದು ಉತ್ತಮ, ನಾಶವಾಗುವುದಕ್ಕಿಂತ".

ಶ್ರೀಮತಿ...........ರು ಹೇಳಿದರು. "ಅವನು ನನ್ನ ಮನದಿನಿಯು ಬಾಲ್ಯದಿಂದಲೂ ಅವನೇ ಹೃದಯೇಶ್ವರನಾಗಿದ್ದ. ಅವನ ತೊದಲ್ನುಡಿ, ತಿಪರ್ರ‍್ಮುಖ, ಗೊತ್ತುಗುರಿಯಿಲ್ಲದ ನಡೆಗಳು ನನ್ನ ಹೃದಯವನ್ನು ಸೂರೆಗೊಂಡಿದ್ದುವು. ಇದ್ದಕ್ಕಿದ್ದಂತೆ ಅವನ ಚರ್ಯೆ ಬದಲಾಯಿಸಿತು. ಟಿಪ್‌ಟಾಪಿಗನಾದ; ಮೆಣಸಿನಪುಡಿ ಹೆಚ್ಚಾದ ಸಾರಿನಂತಿದ್ದ ಅವನು ಸಪ್ಪೆಕಟ್ಟಿನಂತಾದ. ಗೂಬೆಯಂತೆ ಅವನ ಮುಖವಾಯಿತು; ಆವಾಗಲೂ ನನ್ನ ಮುಖವನ್ನೇ ನೋಡಲಾರಂಭಿಸಿದ. ಏನೋ ಹೇಳಬೇಕೆಂದು ಹೊರಟ ಅವನು, ದೇಹಾದ್ಯಂತ ಕಂಪಿಸುತ್ತಾ ಗೂ, ಬ್, ರ್, ಕ್ಕ, ಇತ್ಯಾದಿ ಮಹದ್ವಾಕ್ಯಗಳನ್ನು ಹೇಳಿಮುಗಿಸುತ್ತಿದ್ದ.

ಒಂದುದಿನ ಓದುತ್ತಾ ನಾನು ಕುಳಿತಾಗ ಅವನು ಬಂದ. ದ್ರಾವಿಡ ಪ್ರಣಾಯಾಮವನ್ನು ಮಾಡಿ ಮುಗಿಸಿದ ಅವನು 'ಮೈ ತುಂಸೆ ಪ್ಯಾರ್ ಕರ್‍ತಾ ಹೂಂ' ಎಂದ. ಅಲ್ಲ ಅದನ್ನು ಹೇಳಲು ಇಷ್ಟು ತರಲೆಯೇ. ಇದ್ದ ಸತ್ಯವನ್ನು ಹೇಳಲೇಕೆ. 'ಆಡದಿರಯ್ಯ ಮಾಡಿತೋರು' ಎಂಬ ವಚನವನ್ನು ಅರಿಯದವನವ. ನನಗೆ ರೇಗಿತು. ಓದುತ್ತಿದ್ದ ಪಾಠವನ್ನೇ ಜೋರಾಗಿ ಹೇಳಿದೆ 'ಮಾಲುಂ ಹೋತಾ ಹೈ ಕಿ, ತುಂ ಅಕಲ್ ಬೇವಕೂಫ್ ಹೋ' ಅವನಿಗರ್ಥವಾಗಲಿಲ್ಲ. ರಾಷ್ಟ್ರಭಾಷೆ ಬರದ ಆ ಭಡವನನ್ನು ಕಟ್ಟಿಕೊಂಡರೆ ಬರುವ ಸುಖವಾದರೂ ಏನು? ಅಂದು ನನ್ನ ಪ್ರೇಮ ಭಗ್ನವಾಯ್ತು".

ಮಾನ ನಷ್ಟ ದಾವಾ ಭಯ; ಅಕವಿಪ್ರೇಪದಿಂದ ಉಚ್ಚಾಟನಾ ಸಂಭವಗಳ, ದೆಸೆಯಿಂದ ಇನ್ನೂ ಅನೇಕ ಮಹಿಳಾ ಮಣಿಯರ, ಮಹಾನುಭಾವರ ಅಶ್ಲೀಲ ಕಥನಗಳನ್ನೂ, ಅಂತರಂಗದ ಚಿಂತಾ ತರಂಗಗಳನ್ನೂ ಬಹಿರಂಗಕ್ಕೆಳೆಯಲಾರೆವು.

ಸಹಕಾರ್ಯದರ್ಶಿಗಳಾದ ಶ್ರೀ ಮನೋಜ ಕುಮಾರ, ಶ್ರೀಮತಿ ರತಿದೇವಿ ಇವರಿಬ್ಬರ ಪ್ರಸಂಗವನ್ನು ಉಲ್ಲೇಖಿಸಿದರೆ ಈ ಅರೆತರಕಲು ವರದಿ ಮುಗಿದಂತೆಯೇ ಸರಿ.

ಮನೋಜನೂ, ರತಿಯೂ ಅನುಕ್ರಮವಾಗಿ ಕಿಂಗ್ಸ್ ಹಾಗೂ ಕ್ವೀನ್ಸ್ ಕಾಲೇಜುಗಳಲ್ಲಿ ಹಾಜರಿ ತುಂಬಿಸಿ (ಪ್ರಾಕ್ಸಿಯಿಂದ) ಸಿನಿಮಾ ನೋಡಲೆಂದು ಹೋದರು ಥೇಟರು ರೋಮಿಯೋ-ಜೂಲಿಯೆಟ್ ಪ್ರಥಮ ದರ್ಶನ. ಆಗ ಕಾಮ ನಂಬುಗಳ ಪ್ರವೇಶ. ಅಂಕುರವಾದ ಪ್ರೇಮ ಪರ್ವತರವಾಯಿತು (ಎಳೆಗರುಂ ಕತ್ತಾಗದೇ ?). ಈ ಅವಾಂತರದಲ್ಲಿ ಅವರಿಬ್ಬರೂ ಪರೀಕ್ಷೆಯಲ್ಲಿ ಫಲ್ಟಿಹೊಡೆದರೆಂಬ ಅಂಶ ಗೌಣ.

ಮನೋಜಯುನು ತನ್ನ ತಂದೆಗೆ ಅಪ್ರೆಂಟಿಸ್ ಆದ. (ಪೌರೋಹಿತ್ಯ) ವಿರಹ ವೇದನೆ ಅವನನ್ನು ಸುಡುತ್ತಿತ್ತು. ಗಡ್ಡ ಬಿಟ್ಟ. ಪಂಚೆಯುಟ್ಟ. ಟೋಪಿ

ಯಿಟ್ಟ. ರತಿಯು ತನ್ನ ತಾಯಿಯ ಜೊತೆಯಲ್ಲಿ ಮೆಣಸಿನ ಪುಡಿ, ಹಪ್ಪಳೇತ್ಯಾದಿಗಳ ಉತ್ಪನ್ನವನ್ನಾರಂಭಿಸಿದಳು. ಮೂರು ತಿಂಗಳ ವಿರಹಾವಸ್ಥೆಯ ನಂತರ ಸೆಪ್ಟಂಬರಿಗೆಂದು ಕಾಲೇಜಿಗೆ ಹೋದರು. ಓದಿರದ ಪ್ರಯುಕ್ತ; ಹಾಗೂ ವಾಸನಾ ಬಲದಿಂದ ಪರೀಕ್ಷೆಗೆ ಕೂಡದೆ, ಥೇಟರಿಗೆ ಹೋದರು. ಬೇರೆ ಬೇರೆ ಎಕ್ಸ್‌ಟೆನ್‌ಷನ್ನಿನ, ಬೇರೆ ಬೇರೆ ಮನೆಗಳಲ್ಲಿದ್ದ ಅವರು, ಸರ್ವ ದೇವತೆಗಳಿಗೂ ಅರ್ಪಣೆಯಾದ ನಮಸ್ಕಾರವು ಕೇಶವನಿಗೆ ಹೋಗಿ ಸೇರುವಂತೆ ಥೇಟರಿನ ಮೆಟ್ಟಲ ಮೇಲೆ ಸೇರಿದರು. ಅವಳು ಮನೋಜನನ್ನು ನೋಡಿದಳು. ಗಡ್ಡ ಬೆಳೆದಿತ್ತು. ಆ ಜನ್ಮ ಕಾಂಗ್ರೆಸ್ ಭಕ್ತೆಯಾಗಿದ್ದ ರತಿಗೆ, ಮನೋಜನ ಈ ಸೋಷಲಿಸ್ಟ ಗಡ್ಡ ಅಸಹನೀಯವಾಯಿತು. ಮನೋಜ ರತಿಯನ್ನು ನೋಡಿದ. ತಾಯಿಯ ಕೆಂಪು ಅಂಚಿನ ಸೀರೆ-ಬೆವರಿನಿಂದ ಅಳಿಸಿಹೋದ ಕುಂಕುಮರಾಗ ಕೆನ್ನೆಯ ಮೇಲೆ. ಕಟಾ ಅಹಿಂಸಾವಾದಿಯೂ, ನೆಹರೂ, ಗಾಂಧೀ ಭಕ್ತನೂ ಆದ ಮನೋಜನಿಗೆ ಕಮ್ಯೂನಿಸ್ಟ ರತಿಯನ್ನು ನೋಡಿ ಎದೆಯೊಡೆದಿತು. ಪೆಟ್ಟಿನಿಂದ ಚೇತರಿಸಿಕೊಂಡ ಮೇಲೆ ತಮ್ಮ ಪ್ರೇಮವು ಕುರುಡಾದುದಾಗಿತ್ತೇ ಎನಿಸಿತು. ನೈಜಪ್ರೇಮವಾದ ಪಕ್ಷದಲ್ಲಿ, ಪ್ರೇಯಸಿಯನ್ನು ಮೋಸಗೊಳಿಸಿ, ಮದುವೆಯಾದುದಲ್ಲದೆ ಸಂತಾನವನ್ನೂ ಇದಿರ್ ನೋಡುತ್ತಿದ್ದನೆ? ಅಬ್ಬಾ! ಗಡ್ಡದ ಘಾತುಕ! ನೈಜಪ್ರೇಮ ಅವಳಿಗಿದ್ದುದಾದರೆ, ಮದುವೆಯಾದುದಲ್ಲದೆ, ಮೊದಲ ಗಂಡನ ಆಪೋಶನೆ ತೆಗೆದುಕೊಂಡು ಸಿನಿಮಾಕ್ಕೆ ಬೇರೆ ಬರುತ್ತಿದ್ದಳೆ ಅಯ್ಯೋ! ಗೋಮುಖ ವ್ಯಾಘ್ರ!! ಆ ಪ್ರೇಮ ಪ್ರಸಂಗ ಅಂದು ಕೊನೆಗಂಡಿತು. ಭಗ್ನಪ್ರೇಮಿಗಳಾದ ಮನೋಜ ರತಿಯರು ಅಕವಿಪ್ರೇಪದ ಹಾಲೀ ಅಧಿವೇಶನಕ್ಕೆ ಸಹಕಾರ್ಯದರ್ಶಿಗಳಾದರು. ಪರಸ್ಪರ ವಿಚಾರ ವಿನಿಮಯವಾದನಂತರ ವಸ್ತು ಸ್ಥಿತಿ ತಿಳಿಯಿತು. ಆದರೆ ಒಡೆದ ಗಡಿಗೆಗೆ ಬೆಸುಗೆ ಹಾಕಬಹುದೇ. ಅವರು ಚಿರವಿರಹಿಗಳು. ಅವರಿಗಾದ ನಷ್ಟ; ಲೋಕಕ್ಕೆ ಲಾಭ. ಅವರ ಪರಿಣಯವಾಗಿದ್ದರೆ ಈ ದಿವಸ ರತಿಯು ನಾಟ್ಯ ರಾಣಿಯಾಗುತ್ತಿದ್ದಳೆ? ಮನೋಜ ಕವಿ ಸಾರ್ವಭೌಮನಾಗುತ್ತಿದ್ದನೆ?

ನಾಲ್ಕು ಕೊನೆಯ ಮಾತುಗಳು. "ಅಕವಿಪ್ರೇಪ" ಸಾಧಿಸಬೇಕಾಗಿರುವ ಕಾರ್ಯ ಅಗಾಧವಾಗಿದೆ. ಪ್ರೇಮ ನಿಜವಾಗಿಯೂ ಪೂರಾ ಕುರುಡೇ? ಒಕ್ಕಣ್ಣೇ? ಒಡೆದ ಹೃದಯಗಳನ್ನು ರಿಪೇರಿ ಮಾಡುವುದೆಂತು (ಹಾರ್ಟ್ ರಿಪೇರ್ ರಿಸರ್ಚ್ ನಡೆಯುತ್ತಿದೆ) ಪ್ರೇಮವು ನೈಜಾವಸ್ಥೆಯೋ? ವಿಕೃತಾವಸ್ಥೆಯೋ? ಎಂಬ ಪ್ರಶ್ನೆಗಳಿಗೆ ಉತ್ತರ ಇನ್ನೂ ಸಿಕ್ಕಿಲ್ಲ. ವಿಫಲ ಪ್ರೇಮವು ಜನಪ್ರಿಯವಾಗುವಂತೆ ಚಳುವಳಿ ಹೂಡಬೇಕಾಗಿದೆ. ನಿಧಿಶೇಖರಣೆ, ಕಾರ್ಯಕಾರೀ ಮಂಡಳದ ಚುನಾವಣೆ ಮೊದಲಾದ ಆಡಳಿತ ತೊಂದರೆಗಳು ಬೇರೆ. ಇವೆಲ್ಲವುಗಳ ಪೂರ್ಣ ವರದಿಗಾಗಿ ಕಾದು ನೋಡಿ. ನಿಮಗಿರುವ ಬೇರೆ ಬದುಕಾದರೂ ಏನು?

— ಅ ರಾ. ಸೇ.

—o—

ಯಾರಿಗಿತ್ತು ಮಚ್ಚೆ?

ನಾನು ಭಾನು ಅವಳಿ ಜವಳಿ
ಭಾನು ಜವಳಿ ನಾನು ಅವಳಿ
ನನ್ನ ಮುಖವು ಅವನ ಮೊಗವು
ಎರಡು ಒಂದೆ—ಗುರುತು ಸಿಗವು
ನೋಡಿದವರಿಗೆಲ್ಲ ನಾನೆ ಭಾನು–
ಭಾನು ವಾಗುತಿದ್ದ ಅವರ ನಾನು.

ಅವನು ಭಾನು, ನಾಣು ನನ್ನ ಹೆಸರು
ಕಾರ್ಸಿಕಾನರೆಂದು ನಮಗೆ ಅಡ್ಡ ಹೆಸರು.

ಬೇರೆಯುವರ ಮಾತು ಏಕೆ? ಅಮ್ಮ ಕೂಡ
ಅಂದರೊಮ್ಮೆ—ನಮ್ಮ ಹೆತ್ತ ಕಷ್ಟ ಬೇಡ
ಅವಳಿ ಜವಳಿ ಇರುವರೆಷ್ಟೊ ಇಂದು
ಆದರೆಮ್ಮ ಹೋಲು ಯಾರಿಗಿಲ್ಲವೆಂದು.

ಎಷ್ಟೊ ಬಾರಿ ನನ್ನ ಮೈಗೆ ಎಣ್ಣೆ ತಿಕ್ಕಿ
ಭಾನು ಗೆರೆವರಯ್ಯೊ! ನೀರುಕುಕ್ಕಿ!
ನಾನು ಶೀತೆನೆಂದರಾಯ್ತು–
ಭಾನುಗಂದೆ ಮದ್ದು ಹುಯ್ತು!
ನಾನು ಭಾನು ಓದೆ ಹೋದದೊಂದೆ ಶಾಲೆ
ಚಕಿತರಾದರೆಲ್ಲ ನಮ್ಮ ನೋಡಿ—ಹಳ್ಳಿಶಾಲೆ!
ನಾನು ಭಾನು ಒಟ್ಟಿಗಿದ್ದರ್ಯಾರ ಎರಡು ಕಣ್ಣು
ನಮ್ಮ ನೋಡಿದೊಡನೆ ಆದುವೊಂದೆ ಮೆಳ್ಳಗಣ್ಣು!
ಆದರೊಂದುಗುಟ್ಟು—ನನಗೆ ನಿಮಗೆ ಗೊತ್ತು–
ಕಂಕುಳಲ್ಲಿ ಭಾನುಗೊಂದು ಚಿಕ್ಕ ಮಚ್ಚೆ ಇತ್ತು.

ಭಾನು ಸೂಟಿ ನಾನು ಶುಂಠಿ ನಮ್ಮ ಓದಿನಲ್ಲಿ
ನಾನು ಜಾಣ ಭಾನು ಕೋಣ ಮಿಕ್ಕವೆಲ್ಲ ವಲ್ಲಿ
ಪಾಠವೆಲ್ಲ ಭಾನುಗಾಟ—ಅವನು ದೊಡ್ಡ ಧಡ್ಡ!
ಆಟವೊಂದೆ ಪಾಠ ನನಗೆ—ನಾನು ಬಾಹು ದೊಡ್ಡ!

ಪಾಠವೆಲ್ಲ ಭಾನು ಓದಿ ಮಾರ್ಕು ನನಗೆ ಬಂತು
ಏಟು ತಿನುವುದೊಂದೆ ಸದಾ ಭಾನುಗಾಯ್ತು ಕಂತು.
ಆದರೂವೆ ವರುಷ ವರುಷ ಪ್ಯಾಸು ಆಗಿ ಹೋದ
ನನ್ನ ಮೊದಲಿನಲ್ಲೆ ಬಿಟ್ಟು ತಾನು ಮುಂದೆ ಹೋದ.

ಡಿಗ್ರಿಪಡೆದ ಅಂದು ಮಾತ್ರ ಊರಿನವರು ಎಲ್ಲ ಸೇರಿ
ದೊಡ್ಡ ಪಾರ್ಟಿ ಕೊಡುವೆವೆಂದು ಬೂಂದಿ ಲಡ್ಡು ಪೂರಿ
ಹಲ್ವ ಭಾತು ಕಾಫಿ ಹಣ್ಣು ಹೂವನೆಲ್ಲ ತಂದು
ನನ್ನ ಮುಂದೆ ಸುರಿದರೆಲ್ಲ—ಊರಿಗೂರೆ ಬಂದು!
ಭಾನುಗೊಂದು ಕೆಲಸವಾಯ್ತು ಬೆಂಗಳೂರಿನಲ್ಲಿ
ಬೇಕಾದರಿರಲಿ ಅವನು ಮಂಗಳೂರಿನಲ್ಲಿ!
ಅವನು ಆವನ ಕೆಲಸಮಾಡೆ ದುಡ್ಡು ನನಗೆ ಬಂತು
ಹಣವು ಸಿಗುವ ಸಮಯದಲ್ಲಿ ನಾನೆ ಮುಂದೆ ನಿಂತು.

ನೀವೆ ಹೇಳಿ!—ಡಿಗ್ರಿ ಪಡೆದರೊಂದು ಹೆಚ್ಚೆ?
ಇಲ್ಲವೇನು ಕಂಕುಳಲ್ಲಿ ನನಗೆ ಚಿಕ್ಕಮಚ್ಚೆ?

—ಕೇಫ.

ಹಾದಿಯಲ್ಲಿ ಕೇಳಿಸಿದುದು.

"ಇನ್ನುಮೇಲೆ ವಿದ್ಯಾರ್ಥಿನಿಯರಿಗೆ ನರ್ಸಿಂಗ್ ಬೇರೆ ಕಲಿಸುತ್ತಾರಂತೆ—ಮುಂದೆ ಅವರು ಒಳ್ಳೆ ತಾಯಂದಿರಾಗಲು ಯೋಗ್ಯರಾಗುವುದಕ್ಕೆ — ಹಾಗೇ ಆದರೆ—ಅದೂ ಒಂದು ನಮಗೆ ಸಮಸ್ಯೆ ಆಗುವ ಸಂಭವವಿದೇ ಅಂತ ಕಾಣುತ್ತೇ-ಅಲ್ಲೇನ್ರೀ?"

ವೈದ್ಯರಲ್ಲಿ ವಿಷನಿಮಿಷಗಳು.

"ಹೆಸರು ಮುಖ್ಯ ಡಾಕ್ಟ್ರೇ — ದುಡ್ಡಲ್ಲ. ಒಳ್ಳೇ ಹೆಸರು ಸಂಪಾದಿಸಬೇಕು"

"ಹೌದ್ರೀ - ನೀವು ಹೇಳೋದು ಒಪ್ಪಿದೆ. ಆದರೆ ನಾವಿಲ್ಲಿ ದುಡೀತಿರೋದು ನಮ್ಮ ಹತ್ತಿರ ಇಲ್ಲದಿರುವುದನ್ನ ಸಂಪಾದಿಸೋಕಲ್ವೇ?"

— "ಕೇಫ"

ನಮ್ಮ ಪ್ರಕಟಣೆಗಳು

ಉದಯರಾಗ	—	ಪ್ರಣಯ ಗೀತೆ
ಪತ್ರ ಪ್ರಮಾದ	—	ತಾಯಿಯ ಕರುಳು
ಪದವೀಧರ	—	ಹೊಸಲು ದಾಟಿದ ಹೆಣ್ಣು
ಮೊದಲ ನೋಟ	—	ಕೈ ಸನ್ನೆ
ಗಾಳಿಗೋಪುರ	—	ಸಿನಿಮಾ ಯಾತ್ರೆ
ಸಂಜೆಗತ್ತಲು	—	ಗೆಳತಿಯ ಉಡುಗರೆ
ಸಂಧ್ಯಾರಾಗ	—	ಚಂದುಟಿಯ ಮುತ್ತು
ಪ್ರೇಮಾಲಿಂಗನ	—	ನಿಶಾ ರಾತ್ರಿ
ನಗ್ನ ಸತ್ಯ	—	ಮುಳ್ಳಿನ ಹಾಸಿಗೆ
ತೂರಿಬಂದ ತಾರೆ	—	ರಾಹುಕಾಲ
ಕಾಲಚಕ್ರ	—	ವರದಕ್ಷಿಣೆ
ಮುಟ್ಟದ ಮಡಕೆ	—	ನಿರಾಶ್ರಿತೆ
ಕಣ್ಣೀರು	—	ಮುಂದೇನು ?

ಭ ಗ್ನ ಮಂ ದಿ ರ

ವಿ. ಸೂ.—ಎಲ್ಲವನ್ನೂ ಒಟ್ಟಿಗೆ ತರಿಸಿಕೊಳ್ಳುವವರಿಗೆ, ಅನುಭವಾಮೃತ, ನೀತಿ ಮಾರ್ಗ ದರ್ಶಿನಿ, ವಿವೇಕ ಚೂಡಾಮಣಿ, ಹಿಂದೂ ಧರ್ಮಬೋಧೆ, ಕೈವಲ್ಯ ಪದ್ಧತಿಗಳ ಒಂದೊಂದು ಪ್ರತಿಗಳನ್ನು ಉಚಿತವಾಗಿ ಕೊಡ ಲಾಗುವುದು.

—ಹೆಚ್. ಪಿ. ಸಾಟಿ.

ವಿದ್ಯಾಭ್ಯಾಸ — ಬೇಸ್ತು

ನಾನು, ರಾಜ, ಚಂದಿ. ಎರಡು ಸೈಕಲುಗಳನ್ನೂ, ಒಂದು ಸೈಕಲ್ ಕಳೇಬರವನ್ನೂ ದಬ್ಬುತ್ತ ಕೆಂಡಾಪುರಕ್ಕೆ ಬಂದೆವು. ಊರಬಾಗಿಲಿನ ಕಂಬಗಳನ್ನು ಹಾಯ್ದು ಅರ್ಧ ಫರ್ಲಾಂಗು ದೂರ ಹೋಗುವುದರಲ್ಲಿ, ಹದಿನೈದು ಇಪ್ಪತ್ತು ಕೆಂಡಾಪುರಸ್ಥರು ನಮ್ಮನ್ನು ಮುತ್ತಿದರು.

ನಾವು ನಿಂತೆವು.

"ಗೋವಾಕ್ಕೋ?" ಅಂದರು ಯಾರೋ.

"ಅಲ್ಲ" ಅಂದೆ.

ಕೆಂಡಾಪುರಸ್ಥರು ವಾಪಸಾದರು.

ಚಂದಿ ಹೇಳಿದ – "ಅಯ್ಯೋ, ನಾವು ಗೋವಾಕ್ಕೇ ಹೊರಟಿದ್ದೇವೆ ಅಂದಿದ್ದರೆ ಹಾಳು ಈ ನನ್ನ ಸೈಕಲ್ಲಾದರೂ ರಿಪೇರಿ ಮಾಡಿಸಬಹುದಿತ್ತೋ ಏನೋ?" ಅಂತ.

ಅದಕ್ಕೆ ರಾಜ – "ಸೈಕಲ್ ರಿಪೇರಿ ಆಗ್ತಿತ್ತೋ ಇಲ್ವೋ ಗೊತ್ತಿಲ್ಲ. ಆದರೆ ಈ ಊರಿನ ಕೆಲವು ಧಾಂಡಿಗರೂ ನಮ್ಮ ಬೆನ್ನು ಹತ್ತುತ್ತಿದ್ದರು" ಅಂದ.

"ನಾನು 'ಅಲ್ಲ'ವೆಂದು ಹೇಳಿದ್ದು ಅದಕ್ಕೇ" ಅಂದೆ.

"ನಿಜವಾಗಿ ಏಕ್ರೋ ಗೋವಾಕ್ಕೆ ಹೋಗಬಾರದು?" ಕೇಳಿದ ಚಂದಿ.

"ಖಂಡಿತ ಹೋಗಬಹುದು" ಅಂದ ರಾಜ.

ಚಂದಿ – "ನಮಗೂ ಈಗ ಸಾಕಷ್ಟು ರಾಜಕೀಯ ಪರಿಶ್ರಮವಿದೆ. ಹಾಗೂ ಹೀಗೂ ಗೋವಾ ಸ್ವಾತಂತ್ರ ಹೊಂದೋ ಹೊತ್ತಿಗೆ ನಾವೇ ಮುಂದಿದ್ದು ಸ್ವಾತಂತ್ರ್ಯವನ್ನು ನಮ್ಮ ಕೈಗೇ ತೆಗೆದುಕೊಂಡರೆ ನಮ್ಮ ಜನ್ಮ ಸಾರ್ಥಕವಾಯಿತು" – ಅಂದ.

ರಾಜ ಆಗ ಹೇಳಿದ "ಹೌದೋ – ನಮ್ಮ ಜೀವನದ ಸಮಸ್ಯೇನೆಲ್ಲಾ ಒಂದೇ ಏಟಿಗೇ Solve ಮಾಡಬೋದು. ಅಲ್ಲಿಂದ ಗಡಿಯಾರ, ಪೆನ್ನು, ರೇಡಿಯೋ.... ಎಂಥಾ Chance ಗೊತ್ತೇನ್ರೋ?...."

ನನಗೆ ಸುಸ್ತಾಗಿತ್ತು.

"ಈಗ ಸಧ್ಯಕ್ಕೆ ಈ ಹಡಕಸ್ಪಿ ಸೈಕಲ್ಲನ್ನ ಎಲ್ಲಾದ್ರೂ ರಿಪೇರಿ ಮಾಡಿಸೋ ಯೋಚನೆ ಮಾಡೋಣ ಮೊದಲು – ಆಮೇಲೆ ನಿಮ್ಮ ಇಷ್ಟ ಬಂದಕಡೆ ಅಭ್ಯಂತರವಿಲ್ಲ ಹೋಗಬಹುದು" ಅಂದೆ.

ಕೆಂಡಾಪುರಕ್ಕೆಲ್ಲಾ ಒಬ್ಬನೇ ರಿಪೇರಿದಾರ—ಸೈಕಲ್ಲು, ಛತ್ರಿ, ಲಾಂದ್ರ ಎಕ್ಕಡ, ಪಾತ್ರೆಕಲಾಯಿ, ಲಾಳ ಎಲ್ಲಕ್ಕೂ ಅವನೇ ಗತಿ. ಜೊತೆಗೆ ಚಿಲ್ರೆ ಅಂಗಡಿ, ಕಾಪಿ, ಚಾಯ್ ಅಂಗಡಿ. ಹೀಗಾಗಿ ಆತ ತನ್ನ ಇತರ ಕಸುಬುಗಳನ್ನೆಲ್ಲಾ ಮುಗಿಸಿ ಚಂದೀ ಸೈಕಲ್‌ಕಡೆ ಗಮನ ಕೊಡೋ ಹೊತ್ತಿಗೆ ಮಧ್ಯಾಹ್ನ ದಾಟಿತ್ತು. ಆದರೂ ಆತ ಸರ್ವಪಂಡಿತನಾಗಿದ್ದದ್ದು ನಮ್ಮ ಪುಣ್ಯ – ತನ್ನ ಎಲ್ಲಾ ಕಸುಬುಗಳ ಅನುಭವ ವನ್ನು ಉಪಯೋಗಿಸಿ ಚಕ್ರ ರಿಪೇರಿಮಾಡಿಕೊಟ್ಟ.

ಸಾಯಂಕಾಲದ ಹೊತ್ತಿಗೆ ಶಿರೂರು ಸೇರಿದೆವು. ದೊಡ್ಡೂರು – ಹೈಸ್ಕೂಲು, ಹದಿನಾಲ್ಕು ಹೋಟಲುಗಳಿರುವ ಊರು ಶಿರೂರು. ಒಂದು ಹೋಟಲಲ್ಲಿ ಊಟ ಮುಗಿಸಿ, ಉಳಿಯಲು ಸ್ಥಳ ಹುಡುಕಿದೆವು. ಸಾಧಾರಣವಾಗಿ ಪ್ರಯಾಣಿಕರು, ಬೇರೆ ಯಾವ ಜಾಗವೂ ಸಿಗದಿದ್ದಲ್ಲಿ, ಮುಸಾಫಿರ್‌ಖಾನೆಯಲ್ಲಿ ಉಳಿಯುವುದು ವಾಡಿಕೆ. ಆದರೆ ನಮಗೆ ಮುಸಾಫಿರ್‌ಖಾನೆಗಳ ಹೆಸರೆತ್ತಿದರೆ ಭಯ. ಹಿಂದೆ – ಪ್ರಾಯಶಃ ಜೀಕನಹಳ್ಳಿಯಲ್ಲಿರಬೇಕು–ಒಂದು ಭಯಂಕರ ಮುಸಾಫರ್‌ಖಾನೆಯಲ್ಲಿ ಉಳಿದು ಪ್ರೇತಭಯಪಟ್ಟಿದ್ದೆವು. ಆದರೂ ಬೇರೆ ಮಾರ್ಗ ತೋಚದೆ ಶಿರೂರು ಮುಸಾಫಿರ್ ಖಾನೆ ಹುಡುಕುತ್ತ ಹೊರಟೆವು.

ನೀವು ಪ್ರಯಾಣ ಮಾಡಿದ್ದರೆ ನಿಮಗೆ ಗೊತ್ತಿರುತ್ತೆ – ಚಿಕ್ಕ ಊರುಗಳಲ್ಲಿ ಮುಸಾಫಿರ್‌ಖಾನೆ ಎಲ್ಲಿದೆ ಅಂತ ಕೇಳಿ ತಿಳಿಯಬೇಕಾಗಿಲ್ಲ. ಅನಾಥಶಿಶುಗಳಹಾಗೆ ಅವೇ ಸ್ವಪ್ರಕಟವಾಗುತ್ತವೆ. ಶಿರೂರು ಮುಸಾಫಿರ್ ಖಾನೆಯನ್ನು ನಾವೇ ಗುರುತಿಸಿ, ಆಕಡೆ ಹೊರಟೆವು. ಸುಮಾರು ಐವತ್ತು ಗಜಗಳು ದೂರದಲ್ಲಿರುವಾಗಲೇ ಆ ಕಟ್ಟಡದೊಳಗಿಂದ ಧ್ವನಿಗಳು ಕೇಳಿಬಂದವು—

"ರಾಣೀನ ಯಾಕೋ ಕೊಟ್ಟೇ?" ಅಂದಹಾಗೆ ಕೇಳಿಸಿತು.

ಚಕಿತನಾಗಿ ನಿಂತೆ ರಾಜ ಚಂದಿ ಇಬ್ಬರೂ ನಿಂತರು.

"ಇನ್ನೇನುಮಾಡಲಿ – ಗುಲಾಮನ್ನ ಬಲೀ ಕೊಡಬೇಕಾಗಿತ್ತೇ?" ಅಂತ ಮತ್ತೊಮ್ಮೆ ಧ್ವನಿಬಂತು—

ನನಗೆ ಧೈರ್ಯವಾಯ್ತು. ಒಬ್ಬ ಗುಲಾಮನನ್ನು ಕಾಪಾಡಿ ರಾಣಿಯನ್ನಾದರೂ ಬಲಿಕೊಡುವ ಪ್ರಸಂಗ ವೆಂದರೆ– ಇಸ್ಪೀಟ್ ಆಟವೇ ಇರಬೇಕು.

"ಯಾರೋ ಇಸ್ಪೀಟ್ ಆಡ್ತಾ ಇದ್ದಾಹಾಗಿದೆ ಕಣ್ರೋ" ಅಂದ, ರಾಜ ಧೈರ್ಯವಾಗಿ

"ಗುಗ್ಗು – ಇದಕ್ಕೆ ಇಷ್ಟು ಯೋಚನೇ ಮಾಡಿದ್ಯಾ – ನನಗೆ "ರಾಣೀ"ಂತ ಕೇಳಿದ ತಕ್ಷಣ ತಿಳೀತು ನಡೀರಿ – ನೋಡೋಣ" ಅಂತ ಹೇಳುತ್ತಾ ಚಂದಿ ಚುರುಕಾಗಿ ಹೆಜ್ಜೆಹಾಕಿದ.

ಚಂದೀಗೆ ಇಸ್ಪೀಟ್ ಹುಚ್ಚು ಸ್ವಲ್ಪ ಜಾಸ್ತಿ. ನಿಜವಾಗಿ ಹೇಳಬೇಕಾದರೆ ಚಂದಿಯ ದುರಾದೃಷ್ಟಕ್ಕೆ ಕಾರಣ ಚಂದಿಯಲ್ಲ – ಈ ಐವತ್ತೆರಡು ಎಲೆಗಳನ್ನ ಮೊದಲು ಕಂಡುಹಿಡಿದವನು! ಇಂದು ಅವನು ಬದುಕಿದ್ದರೆ ಚಂದೀಗೆ ಬದಲಾಗಿ ಅವನ್ನೇ ಫಲ್ಲೀಗೆ ಹಾಕಬಹುದು! ನನಗೆ ಈಗ ಮುಸಾಫರ್ ಖಾನೆಯೊಳಕ್ಕೆ ಹೋಗೋಕೇ ಭಯವಾಯ್ತು. ಆದರೂ ಧೈರ್ಯಮಾಡಿ ಚಂದಿಗೆ ಹೇಳಿದೆ—

"ಲೋ – ಅಲ್ಲಿ ಇಸ್ಪೀಟ್ ಆಟದಲ್ಲಿ ಸೇರೋದು ಬೇಡ" ಅಂತ.

"ಹೂ – ಬಾ ಭೇಗ ಹೋಗೋಣ" ಅಂತ ಧೈರ್ಯಕೊಟ್ಟ.

ಹೋದೆವು.

ಒಳಗೆ ಐದು ಜನರ ಜಾಕಿ ಬೇಸ್ತು ಆಟ. ನಾವು ಒಳಗೆ ನುಗ್ಗಿದ್ದು, ಆಟಗಾರರ ಹಿಂದೆ ನಮ್ಮ ಜಾಗಗಳನ್ನು ಹುಡುಕಿಕೊಂಡು ನಿಂತಿದ್ದೂ, ಅಲ್ಲಿ ಯಾರಗಮನಕ್ಕೂ ಬರಲಿಲ್ಲ, ಆಟ ಮುಗಿಯುವವರಿವಿಗೂ ಯಾರ ಗಮನಕ್ಕೂ ಬರುವ ಸಂಭವವಿರಲಿಲ್ಲ.—

ಆದರೆ – ಮೂರನೇ ಬೇಸ್ತು ಆಡುತ್ತಿದ್ದಾಗ (ಅಂದರೆ ನಾವು ಹೋದಮೇಲೆ ಅದು ಐದನೇ ಮೂರನೇ ಬೇಸ್ತು) – ಮಧ್ಯದಲ್ಲಿ ಚಂದಿ ಹಠಾತ್ತನೇ ತನ್ನ ಮುಂದಿದ್ದ ಆಟಗಾರರ ಕೈಯಿಂದ ಒಂದು ಎಲೆ ತೆಗೆದು ಮೇಜಿನಮೇಲೆ ಹಾಕಿದ.

ಮೂರನೇ ಬೇಸ್ತು – ಚಂದೀ ಎಸೆದ ಎಲೆ ಡೈಮಂಡ್ ಜಾಕಿ – ಪಟ್ಟು ಕಳಾವರು – ಇಳಿತ ಕಳಾವರು ಜಾಕಿ – ಟ್ರಂಪು ಕಳಾವರು—

"ಕ್ಷಮಿಸಿ ಸಾರ್ – I am Sorry – " ಅಂದ.

ಆದರೇನು? – ಚಂದಿಯ ಶಿಷ್ಯನಕೈಲಿ ಟ್ರಂಪಿಲ್ಲ! – ಶಾಂತಿ ಏರ್ಪಟ್ಟಮೇಲೆ ಎಲ್ಲರಿಗೂ ಪರಸ್ಪರ ಪರಿಚಯವಾಯ್ತು ಐದುಜನ ಆಟಗಾರರೂ ಶಿರೂರಿನ ಅಧಿಕಾರಿಗಳು–ಮೂವರು ಉಪಾಧ್ಯಾಯರು, ಒಬ್ಬರು ದಫೇದಾರ್ರು, ಮತ್ತೊಬ್ಬರು ರೆವಿನ್ಯೂ ಇನ್ಸ್ಪೆಕ್ಟರು.

ಚಂದೀನ ಬಹಳ ಆದರದಿಂದ ಆಟಕ್ಕೆ ಕರೆದರು. ನನ್ನ ಮುಖ ನೋಡಿದ. ರಾಜ ಆಟಕ್ಕೆ ಬರೊಲ್ಲವೆಂದ – ಹಾಗಾಗಿ ನಾನು ಚಂದಿ ಸೇರಿ ಏಳುಜನ ಜಾಕಿ ಬೇಸ್ತು ಆಟಕ್ಕೆ ಕುಳಿತೆವು. ರಾತ್ರಿ ಹತ್ತುಘಂಟೆಗೆ ಆಟ ಮುಕ್ತಾಯವಾಯ್ತು – ನಂದೂ ಚಂದೀದು ಸೇರಿ ನನಗೆ ಮೂರೂವರೆ ಬಿತ್ತು.

ಆಟ ಮುಗಿದಮೇಲೆ ಒಬ್ಬ ಉಪಾಧ್ಯಾಯರು, ದಫೇದಾರ್ರು, ರೆವಿನ್ಯೂ ಇನ್ಸ್ಪೆಕ್ಟರು ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಮತ್ತಿಬ್ಬರು ಉಪಾಧ್ಯಾಯರು ಅಲ್ಲೇ ಉಳಿದರು – ಇಬ್ಬರಿಗೂ ಸಂಸಾರವಿಲ್ಲ – ಶಿರೂರಿನಲ್ಲಿ ವಾಸಕ್ಕೆ ಮನೆಯಿಲ್ಲ.

ಹಾಗಾಗಿ ಅವರು ಮುಸಾಫಿರ್‌ಖಾನೆಯಲ್ಲೇ ವಾಸ. ಅವರಿಬ್ಬರೂ ಊಟ ಮುಗಿಸಿ ನಮ್ಮ ಕೋಣೆಗೆ ಬಂದರು – ಎಲ್ಲರೂ ಮಾತಿಗೆ ಕುಳಿತೆವು.

ನಮ್ಮ ಮಾತು ಎಲ್ಲೆಲ್ಲೋ ತಡವರಿಸಿ – ಕೊನೆಯಲ್ಲಿ 'ವಿದ್ಯಾಸುಧಾರಣೆ'ಗೆ ಬಂತು. ನನಗೆ ಅದರ ಹೆಸರು ಕೇಳಿದರೆ ತಲೆನೋವು. ಏಕೆ – ಅಂದರೆ ಇದು ಶುರುವಾದಮೇಲೆ ಹುಡುಗರಿಗೆ ಸ್ಕೂಲಿನಲ್ಲಿ ಏನುಮಾಡಬೇಕು ಅಂತ ಅವರಿಗೆ ಗೊತ್ತಿಲ್ಲ ಹುಡುಗರನ್ನು ಕಟ್ಟಿಕೊಂಡು ಏನುಮಾಡಬೇಕು ಅಂತ ಉಪಾಧ್ಯಾಯರಿಗೆ ಗೊತ್ತಿಲ್ಲ ನನ್ನ ತಂಗೀ ಹುಡುಗರಿಬ್ಬರಿದ್ದಾರೆ–ಒಬ್ಬ ಮಿಡಲ್ Ist ಇಯರ್, ಇನ್ನೊಬ್ಬ ಮಿಡಲ್ II nd ಇಯರ್. ಒಬ್ಬನಿಗಾದರೂ ಅವನ ಕ್ಲಾಸಿನ ಪುಸ್ತಕ ಸಿಕ್ಕಿಲ್ಲ. ಆದರೂ ಕಾಪೀ ಪುಸ್ತಕಗಳು ಮಾತ್ರ ಡಜನ್ ಗಟ್ಟಲೆ ಕೊಂಡಿದ್ದೇವೆ. ಒಂದು ಪುಸ್ತಕದಲ್ಲಿ ಒಂದು ಕಾಪೀ ಬರೆಯುವ ಹೊತ್ತಿಗೆ ಉಪಾಧ್ಯಾಯರು ಬೇರೆ ಕಾಪೀ ಪುಸ್ತಕ ಬೇಕು ಅಂತ ಹಠ ಹಿಡೀತಾರಂತೆ– ಹೀಗಾಗಿ ನನಗೆ ವಿದ್ಯಾಸುಧಾರಣೆ ಅಂದರೆ ತಲೆಗೇ ಹತ್ತಿಲ್ಲ. ಶಿರೂರು ಉಪಾಧ್ಯಾಯರುಗಳಲ್ಲಿ ಹಾಗೆಯೇ ಒಪ್ಪಿಕೊಂಡೆ.

ಅದಕ್ಕೆ ಅವರಲ್ಲಿ ಒಬ್ಬ ಉಪಾಧ್ಯಾಯರು – ಶಿರೂರು ಮಿಡಲ್‌ಸ್ಕೂಲಿನ ನರಹರಿರಾಯರು – ಹೇಳಿದರು—

"ನಿಜ – ಈ ವಿದ್ಯಾಭ್ಯಾಸ ಸುಧಾರಣೆಗಳು ಸ್ವಲ್ಪ ಹತೋಟಿಗೆ ಬರೋತನಕ ಸುಧಾರಿಸಿಕೊಳ್ಳುವುದು ಕಷ್ಟವೇ. ಅದೇ ಕಸುಬಿನಲ್ಲಿರೋ ನಮಗೇ ಕಂಗಾಲಾಗಿರೋವಾಗ ನಿಮಗೆ ಅರ್ಥವಾಗದಿರುವುದು ಹೆಚ್ಚೇನಲ್ಲ. ನಮ್ಮ ದೇಶದಲ್ಲಿ ವಿದ್ಯಾಭ್ಯಾಸ ಕ್ರಮದ ಬದಲಾವಣೆಗಳು ಆಗ ಬೇಕಾದ್ದೇನೋ ನಿಜ. ಆದರೆ ಈಗ ಸದ್ಯಕ್ಕೆ ಎಲ್ಲಾ ಕಲಸು ಮೇಲೋಗರವಾಗಿದೆ. ನಾವು ಚಿಕ್ಕಂದಿನಲ್ಲಿ ಒಂದು ಕಥೆ ಓದಿದ್ದೆವು – ಒಬ್ಬ ತಂದೆ, ತನ್ನ ಮಗ, ತನ್ನ ಕತ್ತೆ, ಇವನ್ನು ಕಟ್ಟಿಕೊಂಡು ಹೋಗುತ್ತಾ, ಹಾದಿಯಲ್ಲಿ ಸಿಕ್ಕಿದವರ ಮಾತನ್ನು ಕೇಳಿ, ಎಲ್ಲರನ್ನೂ ಮೆಚ್ಚಿಸ ಹೋಗಿ, ನಾನಾ ಅವತಾರ ತಾಳುತ್ತಾನೆ. ಈಗ ನಮ್ಮ ವಿದ್ಯಾಭ್ಯಾಸ ಅನ್ನೋದಕ್ಕೆ, ನಮ್ಮ ನಾಯಕರ ಕೈಲಿ ಆ ಕತ್ತೆಯ ಪಾಡಾಗಿದೆ. ವಿದ್ಯಾಭ್ಯಾಸ ಅನ್ನೋದು ನಮಗೆ ಉಪಯೋಗವಾಗುವುದಕ್ಕೆ ಬದಲು ಒಂದು ಸಮಸ್ಯೆಯಾಗಿದೆ. ನಾನಾ ಬಗೆಯಾದ ಬದಲಾವಣೆಗಳು ಏಕಕಾಲದಲ್ಲಿ ವಿದ್ಯಾಭ್ಯಾಸದ ಮೇಲೆ ಧಾಳಿಮಾಡಿ, ಅದರ ಬುಡವನ್ನೇ ಸಡಿಲಮಾಡುತ್ತಿವೆ. ಆದರೂ ವಿದ್ಯಾವಂತರ ಸಂಖ್ಯೆ ಹೆಚ್ಚುತ್ತಿದೆಯೇ? ಅಥವಾ ವಿದ್ಯೆ ನಿಜವಾಗಿ ಬೇಕೆನ್ನುವವರಿಗೆ ಸಿಗುತ್ತಿದೆಯೇ? – ಆ ತೆರನಾದ ಚಿಹ್ನೆ ಕಾಣುತ್ತಿಲ್ಲ. ವಿದ್ಯಾಭ್ಯಾಸಕ್ಕೆ ಇರುವ ಅಡಚಣೆಗಳು ಜಾಸ್ತಿಯಾಗುತ್ತಿವೆಯೇ ವಿನಹ ಕಮ್ಮಿಯಾಗುತ್ತಿಲ್ಲ. ನಮ್ಮ ದೇಶದಲ್ಲಿ ಒಬ್ಬ ಹುಡುಗ ದುರದೃಷ್ಟವಶಾತ್ ಚಿಕ್ಕಂದಿನಲ್ಲಿ ವಿದ್ಯಾಭ್ಯಾಸ ಮಾಡಲಿಕ್ಕೆ ಅವಕಾಶವಿಲ್ಲದೆ,

ಾಸಕ್ಕೆ ಸೇರಿದನೆಂದರೆ, ಸಾಯುವವರಿವಿಗೂ ಅವನು ಕೂಲಿಯೇ! ಯಾವ ನವಾನ ಸುಧಾರಣೆಯಿಂದಲೂ ಅವನಿಗೆ ವಿದ್ಯೆ – ಅಂದರೆ ಲೋಕ ಒಪ್ಪುವಂಥಾ ದ್ಯೆ – ಸಿಗುವಹಾಗಿಲ್ಲ ಆದರೆ ಪಾಶ್ಚಿಮಾತ್ಯ ದೇಶಗಳಲ್ಲಿ, ಅದರಲ್ಲೂ ಅಮೇರಿಕ ಲ್ಲಿ ಅದೇ ಹುಡುಗ ತನ್ನ ಹೊಟ್ಟೇಪಾಡು ನೋಡಿಕೊಂಡು – ಇಂಜಿನಿಯರಾಗ ಹುದು, ಡಾಕ್ಟರಾಗಬಹುದು – ಯಾವ ವಿದ್ಯೆಯಾದರೂ ಕಲಿಯಬಹುದು. ಕ್ಕಂದಿನ ದುರಾದೃಷ್ಟ, ನಿರಾಶೆಗಳನ್ನು ದೊಡ್ಡವನಾದಮೇಲೆ ಸರಿಪಡಿಸಿಕೊಳ್ಳ ಹುದು. ಅಷ್ಟೇಕೆ – ಎಷ್ಟೋ ಜನ ಖೈದಿಗಳು ತಮಗೆ ಖುಲಾಸೆಯಾಗುವ ಾಲಕ್ಕೆ ವಿದ್ಯಾವಂತರಾಗಿ ಜೈಲಿಂದ ಹೊರಗೆ ಬಂದಿದ್ದಾರೆ. ನಿಜವಾದ ವಿದ್ಯಾ ಭ್ಯಾಸದ ಸುಧಾರಣೆಯೆಂದರೆ ಅದು. ಈ ವಿದ್ಯಾದಾನ, ಭೂದಾನ, ಮುಂತಾದ ರೋನಾಮೆಗಳೆಲ್ಲಾ ಖಾಲೀ ರಾಜಕೀಯ ಆವಟಗಳೇ ವಿನಹ ಮತ್ತೇನೂ ಅಲ್ಲ. ದಷ್ಟೂ ಹೆಚ್ಚು ಜನರಿಗೆ ಆದ್ದಷ್ಟೂ ಹೆಚ್ಚು ವಿದ್ಯೆ ಕಲಿಯಲು ಅನುಕೂಲ ಕಲ್ಪಿಸು ದೇ ಒಂದು ಮಹತ್ತರವಾದ ಸುಧಾರಣೆಯೇ ವಿನಹ, ವಿದ್ಯಾಭ್ಯಾಸವನ್ನು ದೊಡ್ಡ ೀಸೆಯಲ್ಲಿ ಹಾಕಿ, ಸೀಸೇ ಕೊರಳನ್ನು ಬಿಗಿಹಿಡಿದಿರುವುದಲ್ಲ—"

"Bottle-neck!" ಅಂದ ರಾಜ.

ಇನ್ನೊಬ್ಬ ಉಪಾಧ್ಯಾಯರು – ಅನಂತ ಮೂರ್ತಿಗಳು – ಹೇಳಿದರು—

"ನಮ್ಮಲ್ಲಿ ಚಿಕ್ಕ ಚಿಕ್ಕ ವಿಷಯಗಳಿಗೆ ಪ್ರಾಮುಖ್ಯತೆ ಹೆಚ್ಚು. ಆದರೆ ಾಸ್ತವವಾಗಿ ಮುಖ್ಯವಾದ್ದ ವಿಷಯಗಳು ಗೋಚರಕ್ಕೇ ಬರುವುದಿಲ್ಲ. ಒಬ್ಬ ಡುಗ ಎಷ್ಟು ವಿದ್ಯೆ ಕಲಿತಿರುವನೆಂಬುವುದಕ್ಕಿಂತ ಎಷ್ಟುದಿನ ಶಾಲೆಗೆ ತಪ್ಪಿಸಿ ಂಡಿದ್ದಾನೆಂಬುದು ಮುಖ್ಯ! ಒಬ್ಬನಿಗೆ ವಿದ್ಯೆಕಲಿಯಲು ಆಶೆಯುಂಟೋ ಲ್ಲವೋ ಅನ್ನುವುದಕ್ಕಿಂತ ಆತನಿಗೆ ಕಲಿಯುವ ವಯಸ್ಸು ಸರಿಯೇ ಇಲ್ಲವೇ ನ್ನುವುದು ಮುಖ್ಯ! ವಿದ್ಯಾಭ್ಯಾಸಕ್ಕೆ ಜಾತಿಮುಖ್ಯ, ಅಂತಸ್ತು ಮುಖ್ಯ ದೊಡ್ಡ ಧಿಕಾರಿಗಳ ನೆಂಟಸ್ತನ ಮುಖ್ಯ, ಎಲ್ಲಕ್ಕೂ ಮೇಲಾಗಿ ಶಿಫಾರಸು ಮುಖ್ಯ, ಟ್ಟನಲ್ಲಿ 'ಬಡವಾ ನೀ ಮಡಗಿದ್ಹಾಗಿರು' ಅನ್ನುವ ಹಾಗೆ ಇರಬೇಕು. ಈಗೀಗ ದ್ಯಾಭ್ಯಾಸದ ಜೊತೆಯಲ್ಲಿ ಕಸುಬು ಕಲಿಸುತ್ತಾರಂತೆ – ಆದರೆ ಅದಕ್ಕಿಂತಲೂ ುಖ್ಯವಾದದ್ದು, ಕಸುಬು ಮಾಡುತ್ತಿರುವಾಗ ವಿದ್ಯೆಕಲಿಯಕ್ಕೆ ಅನುಕೂಲವಾಗ ೀಕು. ಈಗಿರುವಹಾಗೆ ದಿನಕ್ಕೊಂದು ಶಿರೋನಾಮೆ ಕೊಟ್ಟು ಬದಲಾವಣೆಗಳನ್ನು ್ರಾಂತಿಯ ರೂಪದಲ್ಲಿ ಮಾಡುತ್ತ ಬಂದರೆ ನಿಮ್ಮಹಾಗೆ ಎಲ್ಲರೂ ತಬ್ಬಿಬ್ಬಾಗೋದೇ" ಂತ.

ಚಂದೀಗೆ ನಿದ್ರೆ ಹತ್ತಿತ್ತು. ರಾಜ ತೂಕಡಿಸುತ್ತಿದ್ದ. ನರಹರಿರಾಯರನ್ನೂ, ಅನಂತ ಮೂರ್ತಿಯವರನ್ನೂ ಅವರ ಕೋಣೆಯಲ್ಲಿ ಬಿಟ್ಟು ನಾನೂ ಮಲಗಿದೆ.

—"ಕೇಫ"

ಅಯ್ಯಯ್ಯೋ ಪಾಪ!

(ಅಣಕವಾಡು)

(ಪ್ರೊಫೆಸರ್ ಗೋಪಾಲಕೃಷ್ಣ ಅಡಿಗರ ಕವನವನ್ನಣಕಿಸಿ.)

ಇಲ್ಲ.
ಇಲ್ಲ ಇಲ್ಲ ಏನನೊಂದನು
ಮಾಡಲಿಲ್ಲ ಈತನು!
(ಆದರುನು
ಗೌನ್ ಹುಡ್ ಧರಿಸಿಕೊಂಡು
ಡಿಗ್ರಿ ಹೋಲ್ಡರಾದನು!)

ಈತ—
ಸತತ ನಾಲ್ಕುವರ್ಷಕಾಲ
ಕಾಲೆಜ್ ಕಟ್ಟೆ ಏರಿದ!
ಆದರೇನು?
ಒಂದು ಹೆಣ್ಣು ಹಿಂದೆಯೂ
ಹಗಲು ಇರುಳು
ಕುಳಿತೊ ಕಾದೊ
ಹೊಂಚಿ, ಮಿಂಚಿ
ಅಂತು,
ಏನಾದರೂಮಾಡಿ
ತಿರುಗಾಡಿ
ನೆಲಕೆ ಬಿದ್ದ
ಕರ್ಚಿಫ್ ಎತ್ತಿಕೊಟ್ಟು
'ಥ್ಯಾಂಕ್ಸ್'–ಅಂತ
ಅನ್ನಿಸ್ಕೊಳ್ಳಲೇ ಇಲ್ಲ.

ಅದು ಹೋಗಲಿ ಬಿಡಿ;
ಒಂದು,
ಒಂದೇ ಒಂದು
ಹುಡಿಗಿ ಬೆನ್ನಹಿಂದಾದರೂ
ಬರಿಯ ಒಂದು ಸಾರಿಯೂ
ಸೈಕಲ್ ಓಡಿಸಿದನೆ?
ಮತ್ತೆ,
ಸೈಕಲ್ ಅತ್ತ
ರಸ್ತೆ ಇತ್ತ
ಇವನಮೇಲೆ ಅವಳು ಬಿದ್ದಾ
'ಸ್ಸಾರಿ ಮಿಸ್ಟರ್' ಎನ್ನಲಿಲ್ಲ,
ಮತ್ತೆ—
'ಐ ತಾಪ್ ಯೂ'
ಎಂದು ಕಿರುಚಲಿಲ್ಲ.

ಇಲ್ಲ
ಇಲ್ಲ ಇಲ್ಲ ಏನನೊಂದನೂ
ಮಾಡಲಿಲ್ಲ ಈತನು!
(ಆದರೂನಾ
ಗೌನ್‌ಹುಡ್ ಧರಿಸಿಕೊಂಡು
ಡಿಗ್ರಿಹೋಲ್ಡರಾದನು!)

—ಯಂ. ಬಿ. ಮರಕಿಣಿ.

ಸ್ಮಾರಕ ಪರಂಪರೆ

ಪಂಪ ಮಹಾಕವಿಯನ್ನು ಕುರಿತು ಉಪನ್ಯಾಸಮಾಡಿ ಅವನನ್ನೇ ಉಸಿರಾಗಿ ಅನುದಿನವೂ ಸವಿದು ಬೆಳೆದು, ಪಂಪನ ಸ್ಮಾರಕಕ್ಕಾಗಿ ಚಂದಾ ಎತ್ತಿ ಅದರಿಂದಲೇ ಜೀವನ ನಡೆಯಿಸಿದ ನಮ್ಮೂರಿನ ರಂಗಣ್ಣನವರು, ಕಡೆಗೂ ಕಾಲಾಧೀನರಾದರು. "ಪಂಪ ಮಂದಿರ" ಎಂಬ ಹೆಸರಿನ ತನ್ನ ಮನೆಯನ್ನೇ ಅವರು ಕನ್ನಡಿಗರಿಗೆ ದಾನ ಮಾಡಿ ಕೃತಾರ್ಥರಾದರು.

ಇಂಥ ಸಾಹಿತ್ಯ ಸೇವಕನನ್ನು ಕನ್ನಡತಾಯಿ ಮರೆಯಬಾರದು, ತನುಮನ ಗಳಿಂದ ಪಂಪನ ಖ್ಯಾತಿಯನ್ನು ನಮ್ಮ ಹಳ್ಳಿಯ ಜನಕ್ಕೆ ಹರಡಿದ ರಂಗಣ್ಣನವರಿಗೆ ಒಂದು ಸ್ಮಾರಕವೇರ್ಪಡಿಸಬೇಕೆಂದು ಶ್ಯಾನುಭೋಗರಿಗೆ ತೋರಿತು. ಹಟ ಹಿಡಿದು ಅವರು ಅದನ್ನು ಸಾಧಿಸಿದರು. ಚಂದಾ ಎತ್ತಿದರು; ಲಾಟರಿ ಹಾಕಿ ದುಡ್ಡು ಹೊಡೆದರು. ಇಟ್ಟಿಗೆ ಗೂಡೊಂದನ್ನು ಕಿತ್ತು, ಮರ ಕಡಿದು, ಬಾಗಿಲು ಕಿಟಕಿ ಸಂಪಾದಿಸಿ, 'ರಂಗಣ್ಣ ಸ್ಮಾರಕಸದನ'ವನ್ನು ಸ್ಥಾಪಿಸಿದರು.

ಸಾಹಿತ್ಯ ಕ್ಷೇತ್ರದಲ್ಲಿ ಯಾರು ಎಷ್ಟು ಅಲ್ಪಸೇವೆ ಸಲ್ಲಿಸಿದರೂ ಅಂಥ ಕೆಲಸವನ್ನು ಮೆಚ್ಚಿ, ಅವರ ಕೀರ್ತಿಗೆ ಕಲಶವಿರಿಸಿದರಲ್ಲಾ ಶ್ಯಾನುಭೋಗರು! .. ಅವರಿಗೊಂದು ಸ್ಮಾರಕ ಬೇಡವೇನು? ಶ್ಯಾನುಭೋಗರು ಸತ್ತದಿನವೇ ಷುರು, ಅದಕ್ಕಾಗಿ, ಮೇಷ್ಟರ ಪ್ರಯತ್ನ! ಚಂದಾ ವಸೂಲು, ಊರಿನವರಿಗೆ ಹಿಂಸೆ .... ಪಂಪಾಭಿಮಾನಿ ರಂಗಣ್ಣ ಸ್ಮಾರಕಕ್ಕಾಗಿ ದುಡಿದವರಿಗೆ ಸ್ಮಾರಕ ಕಟ್ಟುವುದರ ಕಾಟ....ಕಡೆಗೆ, ಅದೂ ಆಯಿತು. ...."ಪಂಪ ದಾಸಾನುದಾಸ ದಾಸಪ್ಪನ ವನ" ಎಂಬುದೇ ಶ್ಯಾನುಭೋಗರಿಗೆ ನಾವು ಬೆವರು ಸುರಿಸಿ ನಿರ್ಮಿಸಿದ ವನ; ಮೇಷ್ಟರು ಮೈಲಾರಪ್ಪನ ಸಾಹಸದ ಫಲ.

ಇನ್ನು ಆ ಮೇಷ್ಟರನ್ನು ಬಿಟ್ಟೇವೆಯೆ, ನಾವು? ಅವರು ಸತ್ತಾಗ, ಅವರನ್ನು ಹಾಯಾಗಿ ಎಲ್ಲೋ ಅಂತರಿಕ್ಷದಲ್ಲಿ ತೇಲಾಡಲು ಬಿಡುತ್ತೇವೆಯೆ?

ಅವರ ಹಳೆಯ ವಿದ್ಯಾರ್ಥಿಗಳು ಅನೇಕರಿದ್ದರು ನಮ್ಮೂರಲ್ಲಿ....ಅವರಪೈಕಿ, ಕೆಂಚಪ್ಪನೊಬ್ಬ. "ಯೇನ ಕೇನ ಪ್ರಕಾರೇಣ ಪ್ರಸಿದ್ಧ ಪುರುಷೋಭವ" ಎಂಬುದನ್ನೇ ಅವನು ಆ ಮೇಷ್ಟರಿಂದ ಕಲಿತ ಪಾಠ. ಮೈಲಾರಪ್ಪನಿಗೊಂದು ಸ್ಮಾರಕ ಕಟ್ಟಲು ಆತ ನಿಶ್ಚಯಿಸಿದ. ಕೂಡಿದ ಹಣವನ್ನೆಲ್ಲ ಕೆಂಚಪ್ಪ ಕುಡಿದೇ ಕರಗಿಸಿದ. ಕಡೆಗೆ,

ದೇವರಿಲ್ಲದ ಪಾಳುಗುಡಿಗೆ ಸುಣ್ಣ ಬಳಿದು, ಅಲ್ಲಿ ಮೈಲಾರಪ್ಪನ ಫೋಟೊ ಇರಿಸಿ, 'ಮೈಲಾರ ಭವನ' ಎಂದು ಹೆಸರಿಟ್ಟು, ತಾನು ಪಂಪ ದಾಸಾನುದಾಸ ದಾಸಾನು ದಾಸ ಎನಿಸಿ ಮೆರೆದ.

ಮೊನ್ನೆ ನಮ್ಮೂರಿಗೆ ಮಂತ್ರಿಗಳು ಬಂದು, ಊರುಮುಂದಿನ ಅಶ್ವತ್ಥಕಟ್ಟೆಗೆ "ಕೆಂಚಪ್ಪ ಮಂಟಪ" ಎಂದು ಹೆಸರಿಟ್ಟರಲ್ಲವೆ? ಅದೇ, ಆ ಕೆಂಚಪ್ಪನ ಸ್ಮಾರಕ. ಪಂಪಭಕ್ತ * ರಂಗಣ್ಣನಿಗೆ ಸ್ಮಾರಕ ನಿರ್ಮಿಸಿದ ಸಾಹಿತ್ಯಾಭಿಲಾಷಿ ದಾಸಪ್ಪನವರ ಸ್ಮಾರಕವೇರಿಸಿದ ಮೈಲಾರಪ್ಪನವರಿಗೆ ಸ್ಮಾರಕವೇರ್ಪಡಿಸಿದ ಕೆಂಚಪ್ಪನ ಕೀರ್ತಿಯನ್ನು ಆ ಚಂದ್ರತಾರಕಂ ಮೂಜಗಕ್ಕರುಹುವ ಮಂಟಪ ಅದು, ಎಂದು ಆ ಅಶ್ವತ್ಥ ಕಟ್ಟೆಯಬಳಿ ಬೋರ್ಡು ತಿಳಿಸುತ್ತದೆ.

— ನಾ. ಕ.

"ದೇವರೇ ಹೇಳಿದನು, ಪ್ರತ್ಯಕ್ಷ ಬಂದು
ನಾನವನವತಾರ, ಇದ ನೀನು ನಂಬು"
ಎಂದೆನೆಗೆ ಆ ಹುಚ್ಚ, ಹೇಳುತಿರೆ........
ಪಕ್ಕದಾ ಕೋಣೆಯಿಂ, ಇನ್ನೊಬ್ಬ ಹುಚ್ಚ,
"ಬರಿ ಸುಳ್ಳು! ನಾನವಗೆ ಹೇಳಲೇ ಇಲ್ಲ"
ಎಂದವನು ಖಂಡಿಸಿದ!....... ಅವನಾದ ಪೆಚ್ಚು.

ಡಾಕ್ಟರೇ! ಬಿಲ್ಲೆಷ್ಟು? ಹೇಳಿಬಿಡಿ, —
ಎಂದವನು ಆತುರದಿ ಕೇಳಿದರೆ, ಆತ,
"ತಾಳಯ್ಯ! ನೀನಿನ್ನು, ಅದ ಕೇಳಿ, ತಾಳೆ,
ಶಕ್ತಿ ಹೊಂದಿಲ್ಲ" ಎನ್ನುತ್ತ, ಸುಮ್ಮನೆಯೆ ಇದ್ದ.

ತಮತಮೊಳಗೆ ಜಗಳಗಳ ಪರಿಹರಿಸೆ ಯತ್ನಿಸಲು
ಪೋಲೀಸರೇಗೀಕ ನಡುನಡುವೆ ಬರುವರೋ
ಎಂದೊಬ್ಬ ರೇಗಿದನು, ಮೊನ್ನೆ ನಂ ಹಳ್ಳಿಯಲಿ—
ಹೊಡೆದಾಟ ನಿಲ್ಲಿಸಲು ಪೋಲೀಸು ಬಂದಾಗ.

ನವ್ಯಕಾವ್ಯ

ನವ್ಯಕವಿಗಳಿಂದ ಸದ್ಯಕ್ಕೆ ನಮಗೆ ಈಗ, ಇಂದಿನ ಅಥವಾ ನಾಳೆಯ ಪಂಚ ವಾರ್ಷಿಕ ಯೋಜನೆಗಳಿಗೆ, ಯಾವ ಪ್ರಯೋಜನವೂ ಇಲ್ಲದಿದ್ದರೂ, ಮೂರನೆಯ ಯೋಜನೆಯಕಾಲಕ್ಕೆ ಇವರಿಂದ ಜನಲಾಭ ಪಡೆಯಬಹುದು. ಇದೇ ಅವರು ದೇಶಕ್ಕೆ ಮಾಡುವ ಮಹದುಪಕಾರ. ಅಣುರೇಣು ತೃಣಕಾಷ್ಠಗಳಿಂದಲೂ ಭಗವಂತನು ಲೋಕೋಪಕಾರ ಮಾಡಿಸುತ್ತಾನೆ ಎಂಬುದಕ್ಕೆ ಇದೇ ಉದಾಹರಣೆ.

ಅಷ್ಟರೊಳಗೆ, ಹಲವು ನವ್ಯಕವಿಗಳು ಪಠ್ಯಪುಸ್ತಕ ಕಮಿಟಿಗಳಿಗೆ ಸದಸ್ಯರಾಗಿಯೇ ಆಗುತ್ತಾರೆ. ಆಗ, ಅವರ 'ಕವನಗಳು' ಟೆಕ್ಸ್ಟ್ ಆಗಿಯೇ ಆಗುತ್ತದೆ; ಆಗ, ಅವನ್ನು ಆಗಿನ ಕಾಲದ ಬಡಉಪಾಧ್ಯಾಯರುಗಳು ಬೋಧಿಸಲೇ ಬೇಕಾಗುತ್ತದೆ. ಎಳೆ ಹುಡುಗರೂ, ಏಕೆ ಎಳೆ ಹುಡುಗಿಯರೂ ಕೂಡ, ಪಾಪ, ಅವುಗಳನ್ನು ಅರ್ಥಮಾಡಿಕೊಳ್ಳಲೇ ಬೇಕಾಗುತ್ತದೆ.

"ಹೈಡ್ರ ಹೈಡ್ರೊಜ'ನೆಂಬೊ ಷೆರ್ಪಗಳ ತಂಡವೇ
ಭೂದಾನ ಗೋದಾನ ದಾನವರ ದಾನ - ದಿಡ್ಡಿ ಬಾಗಿಲ ಬೀಗ
ಈಡನೋ ಪೀರನೋ ಕ್ರೋಮ ಸೋಮನ ಕ್ರೀಡೆ"

ಅರ್ಥವಾಯಿತೆ? ಆಗಿನ ಪ್ರಶ್ನೆಪತ್ರಿಕೆಗಳಲ್ಲಿ, "ಕ್ರೋಮಸೋಮ ಯಾಗವೆಂದರೇನು, ವಿವರಿಸಿ", "ಷೆರ್ಪಗಳು ಅಸಹ್ಯ ಹಿಮಮನುಜನನ್ನು ಕಂಡದ್ದು ನಿಜವೆ?", "ನಿಮ್ಮ ಪಠ್ಯಪುಸ್ತಕದಲ್ಲಿರುವಂತೆ, ಅದೇ ಶೈಲಿಯಲ್ಲಿ, ಎಂಟುಸಾಲು ನವ್ಯಕಾವ್ಯವನ್ನು ರಚಿಸಿ", ಎಂದು ಹೇಳುತ್ತಾರೆ.

ಹೀಗಾಗಿ, ನವ್ಯಕಾವ್ಯಗಳಿಗೆ ನೋಟ್ಸು ಬರೆದು ಅಚ್ಚುಹಾಕಿಸುವವರಿಗೆ ಸುಗ್ಗಿ!....ಟ್ಯೂಷನ್ ಹೇಳುವವರಿಗೆ ಸುಗ್ಗಿ!....ನವ್ಯಕಾವ್ಯಗಳಿಂದಲೂ ಪ್ರಯೋಜನ ಉಂಟು ಜನಕ್ಕೆ....ಈಗಿಲ್ಲದಿದ್ದರೂ, ನಾಳೆ.

—ಶ್ರೀ ದಾಮೋದರ.

ಇನ್ನೆಲ್ಲಿಯ ನಿದ್ರೆ?

ಕುವೆಂಪು ಕವಿ ತಮ್ಮ ಒಂದು ಕವನದಲ್ಲಿ, "ಕನಸೊಡೆದೆದ್ದೆ; ಇನ್ನೆಲ್ಲಿಯ ನಿದ್ದೆ?" ಎಂದು ನಿಟ್ಟುಸಿರು ಬಿಟ್ಟಿದಾರೆ. ಆದರೆ, ಅವರು ಕನಸು ಕಾಣುವಷ್ಟಾದರೂ, ನಿದ್ರೆ ಮಾಡಿದರು. ನಿದ್ರೆಯಿಂದಾಗುವ ಮಹತ್ಪ್ರಯೋಜನಗಳಲ್ಲಿ ಕನಸು ಬಹು ಮುಖ್ಯವಾದದ್ದು. ಹೊಂಗನಸು, ಹೆಂಗನಸು, ಸವಿಗನಸು ಕಹಿಗನಸು, ಕೊಂದ ಕನಸು ತಿಂದಕನಸು, ಎಂಥದ್ದಾದರೂ ಸರಿಯೆ, ಕನಸು ಕಾಣಬೇಕಾದರೆ, ನಿದ್ರೆ ಅತ್ಯಗತ್ಯ; ನಕ್ಷತ್ರಗಳನ್ನು ಕಾಣಬೇಕಾದರೆ, ಕತ್ತಲು ಹೇಗೋ, ಹಾಗೆಯೆ.

ಅಲ್ಲದೆ, "ನಿದ್ರಾ ಸಮಾಧಿ ಸ್ಥಿತಿಃ", ಎಂದು ಉಪನಿಷದಾಚಾರ್ಯರು ಹೇಳಿದ್ದಾರೆ, ನಮ್ಮ ನಮ್ಮ ಸಮಾಧಿಗಳನ್ನು ಪ್ರವೇಶಿಸಲು ನಾವು ಅರ್ಹರಾಗುವ ತನಕ, ದಿನದಿನವೂ ನಿತ್ಯಜೀವನದಲ್ಲಿ ನಮಗೆ ನಿದ್ರೆಯೇ ಆ ಸಮಾಧಿ ಸುಖವನ್ನು ಕೊಡುತ್ತದೆ. ಆಗ, ಸಂಸಾರದ ಜಂಜಡವಿಲ್ಲ, ಸಾಲಗಾರರ ಕಾಟವಿಲ್ಲ, ಮೇಷ್ಟರುಗಳು ಬರೆಯಿಸಿದ ನೋಟ್ಸುಗಳನ್ನು ಗಟ್ಟಿಮಾಡಿಕೊಳ್ಳುವ ಗೋಳಿಲ್ಲ, ಕಿರೀಟಧಾರಿಗೂ ಟೋಪಿಧಾರಿಗೂ ಆಗ ಯಾವ ವ್ಯತ್ಯಾಸವೂ ಇಲ್ಲ, ಐಕ್‌ಮಹಾಶಯನೂ ಬುಲ್‌ಗನಿನ್ ಮಹಾಶಯನೂ ಆಗ, ಸಮ.

ಇಂಥ ನಿದ್ರೆಯ ಸುಖವನ್ನರಿಯದೆ ಹತ್ತುವರ್ಷಗಳಿಂದ ನರಳುತ್ತಿರುವ ನನ್ನ ಭಂಡಬಾಳನ್ನು ಶಪಿಸುತ್ತ, ನಾನು, ಎನಗಾಗಿ ಬೇರೊಂದು ಗಿಡಮರಾದಿಗಳಿರಲಿಲ್ಲವೆ, ಎಂದು ಚತುರ್ಮುಖನನ್ನು ಬೈದರೆ, ತಪ್ಪೇನು?

ನನ್ನೊಂದಿಗೆ ಸಹತಪಿಸುವ ಕೊರವಂಜಿಯ ವಾಚಕರಂತೆಯೇ, ಇನ್ನೂ ಅನೇಕರು ನನ್ನನ್ನು ನಿದ್ದೆಯಲಿ ಅದ್ದುವುದಕ್ಕಾಗಿ ಬಹಳ ಶ್ರಮವಹಿಸಿದಾರೆ. ಸಾವಿರಾರು ಸಲಹೆಗಳನ್ನು ಅವರು ನನಗೆ ಇತ್ತು, ನನ್ನ ಬದುಕನ್ನೇ ಒಂದು ಮಹಾ ಸಂಶೋಧನೆಯಾಗಿ ಮಾರ್ಪಡಿಸಿದಾರೆ. ಇದರಿಂದಾಗಿ, ನಿದ್ರಾಂಗನೆ ಯಾವ ತಂತ್ರಕ್ಕೂ ಒಳಪಡದ ಹಟಮಾರಿ, ಎಂಬ ಸಿದ್ಧಾಂತಕ್ಕೆ ನಾನು ಬಂದುಬಿಟ್ಟಿದೇನೆ.

ನಿದ್ರೆಗೆ ಹಾಸಿಗೆಯೇ ಪ್ರಧಾನ, ಎಂದು ಕೆಲವರು ವಾದಿಸಿದರು. ಹಾವಿನ ಹಾಸಿಗೆಯಮೇಲೆ ಪವಡಿಸಿ ನಿದ್ದೆಮಾಡುವುದು ದೇವರೊಬ್ಬರಿಗೇ ಸಾಧ್ಯ. ಅರಳೆ

ಹಾಸಿಗೆ ಉಷ್ಣ, ಉಲ್ಲನ್ ಹೊದ್ದರೆ ಶ್ಲೇಷ್ಮ, ಮೆತ್ತಗಿದ್ದರೆ ಪಿತ್ತ, ಮಂದಳಿಗೆ ಯಾದರೆ ಹೊಟ್ಟೆ ಮಂದವಾಗುತ್ತದೆ, ನೆಲವಾದರೆ ಶೀತ, ದಿಂಬು ಎತ್ತರವಾಗಿರಬೇಕು, ಇರಕೂಡದು, ಕಾಲಿನ ಕೆಳಗೆ ದಿಂಬಿರಬೇಕೇ ಹೊರತು ತಲೆದೆಸೆಯಲ್ಲಲ್ಲ, ಇತ್ಯಾದಿ ನೂರಾರು ಸಲಹೆಗಾರರೂ ಡೈಜಸ್ಟ್ ಲೇಖನಗಳೂ ಹೇಳುತ್ತವೆ.

ಮಲಗುವಾಗ ತಗಣೆ ಸೊಳ್ಳೆಗಳನ್ನು ನೆನೆಯದೆ ರಂಗನಾಥ ದೇವರನ್ನೇ ನೆನೆಯಬೇಕಂತೆ, ಅದೊಂದು ಉಪಾಯ. ಮನಸ್ಸು ಹಗುರವಾಗಿರಬೇಕಂತೆ. ಸಂಬಳ ಕಡಮೆ, ಐದನೆಯ ಹುಡುಗಿಗೆ ವರ ಎಲ್ಲಿ, ಅಕ್ಕಸಾಲಿಗ ಎಷ್ಟು ಚಿನ್ನ ಹೊಡೆದ, ಎಂಬ ಯೋಚನೆಗಳಿಗೆ ಸ್ಥಳಕೊಡದೆ, ನಿನ್ನೆ ನಿನ್ನೆಗೆ ನಾಳೆ ನಾಳೆಗೆ ಇಂದ ಸಾಕೆನಗಿಂದಿಗೆ, ಎಂದು ಮೂಗಿನ ತುದಿಯನ್ನೇ ನೋಡುತ್ತ ಕಾಲು ನೀಡಬೇಕಂತೆ.

ಅಂದಹಾಗೆ, ಕಾಲು ನೀಡಿದರೆ ಮಾತ್ರ ಸಾಲದಂತೆ. ರಿಲಾಕ್ಸ್ ಎಂಬ ಒಂದು ತತ್ವವಿದೆ. ಅದರಂತೆ, ನಿದ್ರೆ ಹತ್ತಬೇಕಾದರೆ, ಹಾಸಿಗೆಯಮೇಲೆ ಥೊಪ್ಪನೆ 'ಬಿದ್ದುಕೋ'ಬೇಕಂತೆ. ಆಮೇಲೆ, ತುದಿಗಾಲಿಗೆ, 'ಹುಂ ...ನಿಶ್ಚೇತನವಾಗು,.... ಬಿದ್ದಿರು....' ಎಂದು ಹೇಳುತ್ತ, ಬಿಗಿಯನ್ನೆಲ್ಲ ಸಡಿಲಮಾಡಬೇಕಂತೆ. ಆ ಪಾದ ಚೂಡಂ ಹೀಗೆ ಬಿಗಿತೆಗೆದು, ಹಗುರಮಾಡಿಸಿ, ಹಾಯಾಗಿ ಗಾಳಿಯಂತೆ ತೇಲಿದಾಗ, ನಿದ್ದೆ ಬಂದೇ ಬರುತ್ತದಂತೆ. ಎಡಮಗ್ಗುಲಿನಲಿ ಬಲಮಗ್ಗುಲಿನಲಿ ಮಲಗಬಾರದು, ಅಂಗತವಂತೂ ಶುದ್ಧ ಅವಿವೇಕ; ಬೋರಲು ಮಲಗುವುದೆಂದರೆ, ನಿದ್ದೆ ಬಂದರೂ, ವ್ಯರ್ಥ. ಹೀಗೆ ಅನೇಕ ಉಪದೇಶಗಳು ನನಗೆ ಡಾಕ್ಟರುಗಳಿಂದ ಬಂದಿವೆ.

ಕೋಟ್ಯಂತರ ಪೆನ್‌ಸಿಲಿನ್ ಇಂಜಿಕ್ಷನುಗಳನ್ನು ನನಗೆ ಜಿಲ್ಲಾ ಆಸ್ಪತ್ರೆಗಳಲ್ಲಿ ಕೊಟ್ಟಿದಾರೆ, ನಿದ್ದೆಗಾಗಿ! ಪೆನ್‌ಸಿಲಿನ್ ಹುಚ್ಚು ಹಿಡಿಯುವ ಮೊದಲು, ಟನ್‌ಗಟ್ಟಲೆ ಕಾಲ್‌ಸಿಯಂ ಸೂಜಿ ಮೊನೆಯಿಂದಲೇ ತುರುಕಿದಾರೆ. ವಿಟಮೀನುಗಳನ್ನು ಒಂಟೊಂಟಿಯಾಗಿಯೂ ಜಂಟಿ ಜಂಟಿಯಾಗಿಯೂ ಒಟ್ಟೊಟ್ಟಿಗೆ ಗುಂಪು ಗುಂಪಾ ಗಿಯೂ ನರಗಳೊಳಕ್ಕೇ ನೇರವಾಗಿ ತುಂಬಿದಾರೆ. ಕನ್ನಡಕ ಬದಲಾಯಿಸಬೇಕು, ಎಂದರು, ಹಲ್ಲೆಲ್ಲ ಕಿತ್ತು ಕೃತಕ ಹಲ್ಲು ಕಟ್ಟಿಕೊಟ್ಟರು; ಆ ಕೃತಕ ಹಲ್ಲಿನಿಂದಲೇ ನಿದ್ದೆಗೆ ಭಂಗ ಅಂತಹೇಳಿ ರಾತ್ರಿವೇಳೆ ಅದನ್ನು ತೆಗೆದಿರಿಸಲು ಹೇಳಿದರು, ಸುಮ್ಮನೆ ತೆಗೆದಿರಿಸಿದರೆ ಸಾಲದು, ಎಂದು, ಅದನ್ನ ಯಾವುದೋ ಮಾರ್ಫೀನ್ ದ್ರಾವಕದಲ್ಲಿ ರಿಸಿದರೆ ಅದಕ್ಕೆ ನಿದ್ರೆ ಬರುತ್ತದೆ, ಆಗ, ನನಗೂ ನಿದ್ರೆ ಬರಬಹುದು ಎಂದೊಬ್ಬರು ಅಮೇರಿಕಾ ಪ್ರವಾಸಮಾಡಿದ ಡಾಕ್ಟರು ಹೇಳಿದರು. ಟಾನಿಕ್ಕುಗಳನ್ನು ಕುಡಿಸಿದರು; ಕಣ್ಣುರೆಪ್ಪೆಗಳನ್ನು ಅಂಟಿಸಿ ಮೇಲೆ ಟೇಪ್ ಹಚ್ಚಿ, ಕರೀಸುಲೋಚನ ತಗುಲಿಸಿ ಓಡಾಡಿಸಿದರು ನೋವು ಚಿಕಿತ್ಸಾಪ್ರವೀಣರು,... ನಿದ್ರೆಬರಲಿಲ್ಲ.

ತಲೆಗೆ ತೈಲ ತಿಕ್ಕಿದರು ಎದೆಗೆ ಅಂಜನ ಹಚ್ಚಿದರು; ಹೊಟ್ಟೆಗೆ ಮಟ್ಟೆ ಬಳಿದರು; ಮಲಗುವ ಮೊದಲು ಬಿಸಿನೀರುಸ್ನಾನ, ಅಂದರೊಬ್ಬರು. ಸ್ನಾನಬೇಡ, ಬರೀ ಎರಡು ಪಾದಗಳನ್ನೂ ಹಾಲಲದ್ದಿ, ಉಗುರು ಬೆಚ್ಚಗಿನ ಕತ್ತೆಹಾಲಲ್ಲಿ ಎಂದರಿನ್ನೊಬ್ಬರು. ಉಗುರು ಬೆಚ್ಚಗಿನ ಕತ್ತೆ ಎಲ್ಲಿ ಸಿಗಬೇಕು, ನನಗೆ. ಬರೀ ಹೊಟ್ಟೆಯಲ್ಲಿ ಮಲಗಿ, ಎಂಬ ಸಲಹೆ ಬಂತು, ಕಂಠಪೂರ್ತಿ ತಿಂದರೇನೇ ತಲೆಯೊಳಗಿನ ರಕ್ತದ ಒತ್ತಡ ಕಡಮೆಯಾಗುವುದು, ಎಂದೊಬ್ಬರು ಎಂ. ಡಿ. ಹೇಳಿದರು.

ಪರಂಗಿಯವರು ನಿದ್ದೆ ಬಾರದಿದ್ದರೆ, ಕುರಿಮಂದೆಯೊಂದನ್ನು ಕಲ್ಪಿಸಿಕೊಂಡು, ಒಂದುಕುರಿ ಹಳ್ಳಹಾರಿತು, ಮತ್ತೊಂದು ಕುರಿ ಹಾರಿತು, ಮೂರನೆಯದೂ ಹಾರಿತು, ಎಂದು ಸಾಲಾಗಿ ಚಿತ್ರಿಸಿಕೊಳ್ಳುವರಂತೆ. ಈ ಉಪಾಯ ನನ್ನಂಥವನಿಗೆ ಸರಿಇಲ್ಲ; ಶಾಲಾಮಾಸ್ತರುಗಳಿಗೆ ಸುಲಭ. ರಾಂ ರಾಂ ರಾಂ ಎಂದು ಜಪಿಸುತ್ತ, ವಾನರಸೇನೆ ಲಂಕೆಗೆ ಹಾರಿದ ಚಿತ್ರವನ್ನು ಕಲ್ಪಿಸಿಕೊಳ್ಳಬಹುದು; ಆದರೆ, ಹಾಗೆ ಮಾಡಿದರೆ, ಮೋಕ್ಷ ಸಿಗುತ್ತದೆಯೇ ಹೊರತು, ನಿದ್ದೆ ಸಿಗಲಾರದು.

ಕಾಲೇಜು ಕ್ಲಾಸುಗಳಲ್ಲಿ ಕುಳಿತು ಇಂಗ್ಲೀಷ್ ಮೇಷ್ಟರುಗಳ ಪಾಠ ಕೇಳುತ್ತ ಇದ್ದರೆ, ಐದೇ ನಿಮಿಷದಲ್ಲಿ ಎಂಥ ಜಾಗ್ರದ್-ಪ್ರವೀಣನಿಗೂ ನಿದ್ದೆ ಬರುತ್ತದೆ, ಎಂದು ವೈಸ್‌ಚಾನ್ಸಲರೊಬ್ಬರು ಕಾಗದ ಬರೆದರು. ಆದರೆ, ಒಂದು ಬಾರಿ ಅನುಭವಿಸಿದ ಆ ನರಕಕ್ಕೆ ಮತ್ತೆ ನಾನು ಹೇಗೆ ಧುಮುಕಲಿ? ಕಾಂಗ್ರೆಸ್ ಪಕ್ಷದ ಭಾಷಣ ಕೇಳಿ, ಎಂದರಿನ್ನೊಬ್ಬರು. ಸತ್ಯ ಅಹಿಂಸೆ ಎಂಬ ಪದಗಳು ಪದೇ ಪದೇ ಕಿವಿಗೆ ಬೀಳುತ್ತ, ಅವುಗಳನ್ನು ಸಾವಿರದ ಆರುನೂರನೆಯ ಮೂವತ್ತೆರಡನೆಯ ಬಾರಿ ಕೇಳುವ ಹೊತ್ತಿಗೆ ನಿದ್ದೆ ಸಿದ್ಧ ಎಂದರು. ಆದರೆ, ಭಾಷಣಕಾರರು ಮೂರು ಗಂಟೆ ತಡವಾಗಿ ಬಂದರು; ಟೋಪಿಯನ್ನು ಮರೆತು ಬಂದರು; ಸತ್ಯ ಅಹಿಂಸೆ ಎಂದು ಅವರು ಹೇಳಿದಾಗಲೆಲ್ಲ, ಜನ ಕೂಗಿ ರೇಗಿ ನನ್ನನ್ನೆಬ್ಬಿಸಿದರು. 'ಇನ್ನೆಲ್ಲಿಯ ನಿದ್ದೆ!' ಎಂದು ನಾನೂ ಎದ್ದುಬಂದೆ.

ಮಲಗುವ ಮೊದಲು ಕನ್ನಡ ಕಾದಂಬರಿ ಓದಿದರೆ ನಿದ್ದೆ ಬರುತ್ತದೆ ಎಂದರು ಆದರೆ, ಕಾದಂಬರಿಕಾರರನ್ನು ಕೊಲೆಮಾಡಬೇಕೆಂಬ ಕೋಪವೇ ಅಧಿಕರಿಸಿ, ರಕ್ತದ ಒತ್ತಡ ಹೆಚ್ಚಾಗಿ ತಲೆಸಿಡಿತ ಪ್ರಾರಂಭವಾಯಿತು. ಶತಪಥ ತಿರುಗಿ, ಎಂದರು. ನಾನು ವಾಸಮಾಡುವ ಗಲ್ಲಿಯಲ್ಲಿ ತಿರುಗಿದರೆ, ಅಪಕೀರ್ತಿ. ರೇಡಿಯೋ ತಿರುಗಿಸಿ, ಸಂಗೀತ ಕೇಳಿ, ಎಂದರು. ಧೈರ್ಯ ಸಾಲದೆ ಹೋಯಿತು.

ಶ್ರೀರಂಗಪಟ್ಟಣದ ರಂಗನಾಥ ದೇವರನ್ನು ಧ್ಯಾನಿಸಿ ಅಂದರು. ಮಲೇರಿಯಾ ಬಂತು. ಆಕಳಿಕೆ ಬರದೆ ಇದ್ದರೂ, ಹತ್ತುಸಲ ಆಕಳಿಸಿ, ಎಂದರು. ದವಡೆ ಉಳುಕಿತು. ಕಣ್ಣುಮುಚ್ಚಿ, ಎಂದರು....ಇನ್ನು ನಾನು ಮಾಡಬೇಕಾದದ್ದು ಅದೊಂದೇ ಬಾಕಿ. ಕಟ್ಟಕಡೆಗೆ ಅದನ್ನೂ ಮಾಡೋಣ, ಅಂತ ಇದೇನೆ.

—ಪಾಟೀಲ.

ಹುಚ್ಚು ಹಿಡಿಯಿತು ಎಮಗೆ

ಹುಚ್ಚು ಹಿಡಿಯಿತು ಎಮಗೆ ಹುಚ್ಚು ಹಿಡಿಯಿತು
ರಜತಪರದೆಯ ಮೋಹವೆಂಬ ಪೆಚ್ಚು ಮದ್ದು ತಲೆಗೆ ಏರಿ ||ಪ||

ತಾರೆಯರ ನಾಮಗಳನು ವದನದಲ್ಲಿ ಒದರುತ | ಛಾಯಾ
ಲೋಕದೊಳಗೆ ವಿಹರಿಸುತ್ತ ಚೀರಿ ಚೀರಿ ಹಾಡುತ
ಕ್ಲೇಶಕಾರಿ ಚಿಕ್ಸ್ಟ್ರಗಳೆಲ್ಲವ ಎತ್ತಿ ಎತ್ತಿ ಬಿಸುಡುತ | ಕೆಟ್ಟ
ಕ್ಲಾಸದೆಂಬ ತಂಟೆಯನ್ನು ತೊರೆದು ತೊರೆದು ಬಾಳುವಂಥ || ಹುಚ್ಚು ...

ತಾರಿಕೆಯರ ಪಟಗಳೆಣಿಸಿ ಸೊರಗಿ ಹೋಗುತ | ಶಾಲಾ
ಪಾಠವೆಂಬ ಕೆಟ್ಟ ಕನಸನು ತಳ್ಳಿ ತಳ್ಳಿ ಮರೆಯುತ
ತಾರೆಯರ ಕಂಡರವರರ ಹಿಂದೆ ಹಿಂದೆ ತಿರುಗುತ | ಸಲೆ
ಪೋಸ್ಟರನ್ನು ಕಂಡ ಕಡೆ ಹಲ್ಲು ಹಲ್ಲು ಕಿರಿಯುವಂಥ || ಹುಚ್ಚು....

ಮಂದಮತಿ ಮೈಗಳ್ಳರೆಂಬದ ಮೂಕರಾಗಿ ಕೇಳುತ | ತಾರಾ
ಮಣಿಗಳನ್ನು ನಿಂದಿಪವರ ಜರೆದು ಜರೆದು ಶಪಿಸುತ
ತಂದೆ ನೀಡುವ ದಂಡವೆಲ್ಲವ ಸಿನಿಮಕಾಗಿ ವ್ಯಯಿಸುತ
ಸಿನಿಮ ಭಕ್ತರ ಕೂಗಿ ಕರೆದು ಕೂಡಿ ಕೂಡಿ ನಲಿಯುವಂಥ || ಹುಚ್ಚು

(ದಾಸರಿಗೆ ನಮೋ ಎಂದು)

—ರಾಮಿ.

ನಂಬದಿದ್ದರೆ ಬಿಡಿ

"ನಮಸ್ಕಾರಾ' ಬಾರಯ್ಯಾ" ಎಂದು ಬೆನ್ನುಮೇಲೆ ಗುದ್ದಿದ ಭಾಸ್ಕರ, ಬಚ್ಚ ಬಾಯಿ ಬಿಚ್ಚಿ ನಗುತ್ತಾ. ಬಹುದಿನವಾಗಿತ್ತು ಈತನ ಕೈಗೆ ಸಿಕ್ಕಿ. ಆಗ್ಯೂ ಈಗ್ಯೂ ಒಂದೇ ವ್ಯತ್ಯಾಸ ನಾನು ಕಂಡದ್ದು. ಆಗ ಇದ್ದ ದಂತಾವಳಿ ಈಗ ಇಲ್ಲವಾಗಿತ್ತು. ಉಭಯ ಕುಶಲೋಪರಿ ಸಾಂಪ್ರತ, ಅವರ ಊರಲ್ಲಿನ ಭಾರಿ ಮಳೆ—ಧೂಳು ಗಾಳಿ, ಸೆಕೆಯ ವಾತಾವರಣದ, ಸಂಪ್ರದಾಯದ ಮಾತು ಆಡುತ್ತಿದ್ದಂತೆಯೇ ಸುಡುಬಿಸಿಲು ನಡುರಸ್ತೆ ಬೇಡ ನೆರಳಿಗೆ ಹೊರಡಿ ಎಂದು ಎಚ್ಚರಿಸಿತು.

"ಅಯ್ಯೋ ಇಲ್ಲೇ ನಿಂತುಬಿಟ್ಟೆವಲ್ಲಾ ನಡಿ ಮನೆ ಒಳಗೆ" ಎಂದು ತನ್ನ ಮಾವನ ಮನೆಗೇ ಕರೆದೊಯ್ದ. ಭಾಸ್ಕರ ಬಹುದಿನಕ್ಕೆ ಸಿಕ್ಕಿದ್ದ, ಅವನು ಹೊಡೆಯುವ ಪುಂಖಾನುಪುಂಖದ ಶಂಖ ಕಿವಿಗೆ ಬಹು ಆಪ್ಯಾಯಮಾನ ಕೆಲವರು ಇವನಿಗೆ 'ಬೋರ್‌ರೋಜಿ' ಎಂದಿದ್ದರು. ಹಲವರು 'ಶುದ್ಧ ಶತಬುರುಡೆ' ಅಂದಿದ್ದುಂಟು. ಆದರೆ ತಿಳಿದವರು "ಏಸೊಂದು ಸೊಗಸಾದ ಬುರುಡೆ ಇದು" ಎಂದು ಮೂಗಿನಮೇಲೆ ಬೆರಳಿಟ್ಟಿದ್ದಾರೆ. ಅವನೇನೋ 'ನಂಬದಿದ್ದರೆ ಬಿಡಿ' ಅಂತಲೇ ಹೇಳುತ್ತಾನೆ. ನಿಜವೆಂದೇ ಸಾಧಿಸುತ್ತಾನೆ. ಕೆಲವು ವಿಚಾರಮಾತ್ರ ನುಂಗಲಾರದ ತುತ್ತು. ಕಬ್ಬಿಣದ ಕಡಲೆ.

ಅವನ ಮಾವನಮನೆ ಮುಂದಿನ ವರಾಂಡಾದಲ್ಲೇ ಮಂಡಿಸಿದೆವು. ಎದುರು ಬಾಗಿಲಮೇಲೆ ಹೊಳೆವ ಕಣ್ಣುಗಳ ಕಾಡುಕೋಣದ ತಲೆ ಗೋಡೆಗೆ ತಗುಲಿಸಿದ್ದರು. ಬೈಸನ್ ಅಂದರೆ ಕೇಳಬೇಕೆ, ಅಗಲವಾದ ಹಣೆ, ಬೃಹತ್‌ಕೋಡು, ನೋಡಿದರೆ ಹೆದರಿಕೆ ಬರುವಂತಹ ಮೂಗಿನಹೊಳ್ಳೆ, ಬಹು ಭಯಂಕರ ಪ್ರಾಣಿ — ಹಿಂದೊಮ್ಮೆ ಇಡೀ ಕಾಡನ್ನೇ ನಡುಗಿಸಿರಬೇಕು. ಈಗ ಸತ್ತು ಗೋಡೆಗೆ ಅಲಂಕಾರ ವಸ್ತುವಾಗಿದೆ. ಇದರ ವಿಚಾರ ತಿಳಿಯುವ ಕುತೂಹಲದಿಂದ ಕೇಳಿದೆ "ಭಾಸ್ಕರಾ-ಈ ಕಾಡುಕೋಣ ನಿಮ್ಮ ಮಾವನವರು ಹೊಡೆದಿದ್ದೆ?". ಅವನು ಸಮಾಧಾನದಿಂದ ಹೇಳಿದ "ಅಯ್ಯಾ ನಮ್ಮ ಮಾವ ಹಡೆದ ಕೋಣವನ್ನೇ ನಾನು ಮದುವೆಯಾಗಿರೋದು — ಈ ಕಾಡು ಕೋಣನ್ನ ನಾನೇ ಹಿಡಿದುಕೊಂದದ್ದು" ಎಂದು ಲೀಲಾಜಾಲವಾಗಿ ಹೇಳಿದ.

ಎಲ ಪ್ರಚಂಡಾ ಎಷ್ಟು ನಿರರ್ಗಳವಾಗಿ, ಶಾಂತಮುದ್ರೆಯಿಂದ- ಅತಿ ಸುಲಭದ ಕೆಲಸ ಅನ್ನೋ ಧ್ವನಿಯಲ್ಲಿ ಹೇಳ್ತಾ ಇದ್ದಾನಲ್ಲಾ. ಕಾಡುಕೋಣನ್ನ ಹಿಡಿದು

ಕೊಂದೆ ಅಂತ ಬಿಡ್ತಾ ಇದ್ದಾನಲ್ಲ! ಕಾಡನ್ನೇ ಸರಿಯಾಗಿ ಕಾಣದ ಈ ಕಾಡುಪಾಪ ಕಾಡುಕೋಣ ಹಿಡಿದು ತಂದೆ ಎಂದರೆ ನಗದೆ ಇರಲು ಹ್ಯಾಗೆ ಸಾಧ್ಯ?

" ಬುರುಡೆ ಹೊಡೀಬೇಡ ಭಾಸ್ಕರ — ಶಿಕಾರಿ ಶೋಕಿನ ನಿಮ್ಮ ಮಾವಂದಿರೇ ಇದನ್ನ ಶಿಕಾರಿಪುರದಲ್ಲಿದ್ದಾಗ, ಶಿಕಾರಿ ಮಾಡಿರಬೇಕು" ಎಂದು ಕುರ್ಚಿಮೇಲೆ ಚಕ್ಕಳಮಕ್ಕಳ ಹಾಕಿ ಮಂಡಿಸಿದೆ. ಭಾಸ್ಕರನೂ ಕೂತುಕೊಂಡ: ಕಣ್ಣುಮುಚ್ಚಿ ಪ್ರಾರಂಭಿಸಿದ—" ಹತ್ತೊಂಬತ್ತುನೂರಾ ನಲವತ್ತೆರಡು ಆಶ್ವೀಜ ದಶಮಿ, ಮೃಗಶಿರಾ ನಕ್ಷತ್ರ ನಾಲ್ಕನೆಪಾದದಲ್ಲಿ ನಾನು ಎರಡೇ ಪಾದದಲ್ಲಿ ನಿಂತು ಡಬ್ಬಲ್‌ಬ್ಯಾರಲ್ ಗನ್ನಿನಲ್ಲಿ ಹೆದರಿಸಿಕೊಂಡು ಹಿಡಿದು ಮೇಕೆಮರಿ ಎಳೆದುತರೋಹಾಗೆ ಹಿಡಿದು ತಂದೆ" ಎಂದು ನಿರಾತಂಕವಾಗಿ ಹೇಳಿಬಿಟ್ಟ.

ನಾನು ಹುಬ್ಬುಗಂಟಿಕ್ಕಿದೆ. ಇದು ನಂಬೋ ವಿಚಾರವಲ್ಲ ಎಂದು ಆಕಳಿಸಿದೆ. ಅವನೇ ಮತ್ತೆ ಮಾತು ತೆಗೆದ — "ಸುಳ್ಳಲ್ಲ ನಿಜ — 'ನಂಬದಿದ್ದರೆ ಬಿಡಿ' ಎಂದು ನಂಬಲಾಗದ ಭಾರಿ ಸಾಹಸದ ವಿವರಣೆ ಹೇಳುವ ಹುಂಬನಲ್ಲ ನಾನು–ಈ ಭಾಸ್ಕರನ ವಿಷಯಕ್ಕೆ ತಸ್ಕರರ ಹಾಗೆ ಸಂಶಯ ಪಡಬಾರದು ಕಣಯ್ಯಾ ನೋಡು ಅದರ ಬಟ್ಟಲಗಲದ ಕಣ್ಣು. ಅದು ಬದುಕಿದ್ದಾಗ ಅದರ ಕಣ್ಣಲ್ಲಿ ನೋಡಿಕೊಂಡು ಕೆದರಿದ ಕ್ರಾಪು ಹೀಗೆ ಬಾಚಿಕೊಂಡೆ" ಎಂದೆನ್ನುತ್ತಾ, ಕೋಟಿನ ಮೇಲುಜೇಬಿಂದ ಪುಟ್ಟ ಬಾಚಣಿಗೆ ತೆಗೆದು ಕೆದರಿದ ತನ್ನ ಕ್ರಾಪನ್ನು ತೀಡಿ ಬಾಚಿಕೊಂಡು, ಗೀರುಮೀಸೆಯ ಮೇಲೆ ಕೈ ಆಡಿಸಿದ.

ನನಗೆ ಕಣ್ಣುಬೋಳೆ ಬಂತು. ಎಲ ಹೈದಾ — ಈ ಪಾಟಿ ನಾಚಿಕೆ ಇಲ್ದೆ ಬುರುಡೆ ಹೊಡೀತಾನಲ್ಲಾ—ಆದರೂ ಎಂತಹ ಸೊಗಸಾದ ಬುರುಡೆ. ಅವನು ಮಾತಾಡುವಾಗ ಹಾಗೇ ಕೇಳುವ ಎಂದೆನಿಸುತ್ತಿತ್ತು.

" ಅಹಹಹ....ಅಂದರೇ ಇದನ್ನು ಹಿಡಿದಾಗ ಪಳಗಿದ ನಾಯಿಯಂತೇ ಬಾಲಾ ಆಡಿಸಿತು ಎಂದು ತಿಳಿಯಲೆ?" ಎಂದು ನಸುನಕ್ಕೆ.

ಭಾಸ್ಕರನ ಮುಖ ಅರಳಿತು. ತನ್ನ ನಂಬದಿದ್ದರೆ ಬಿಡಿ ಕಥೆಯನ್ನು ಕೂತು ಕೇಳುವ ಕಿವಿಗಳೆರಡು ಸಿಕ್ಕವಲ್ಲಾ, ಎಂದು ಬೋರುಮಾಡುವ ಅವನ ಬಾಯಿ ಚಪ್ಪರಿಸಿತು, ಗಂಟಲು ಕ್ಯಾಕರಿಸಿತು. ಎರಡೇ ಗುಟುಕು ತಿಳಿನೀರು ಕುಡಿದು ಹೇಳೇ ಹೇಳಿದ ...

" ಆ ಗೊಂಡಾರಣ್ಯದಲ್ಲಿ ಹೆಮ್ಮರಗಳು ಇಕ್ಕೆಲದಲ್ಲೂ ಬೃಹದಾಕಾರವಾಗಿ ಬೆಳೆದು ಬಿಸಿಲು ನೆಲ ಮುಟ್ಟಲು ಕಷ್ಟವಾಗಿತ್ತು. ಹೆಗಲಮೇಲೆ ಡಬ್ಬಲ್‌ಬ್ಯಾರಲ್ ಗನ್ ಹೊತ್ತು ಏಕಾಕಿಯಾಗಿ ಸೊರಬದಿಂದ ನಾಲ್ಕುಮೈಲು ಜಡೇ ಅಂತ ಒಂದು

ಹಳ್ಳಿ ಇದೆ ಆ ರಸ್ತೇಲಿ ಹೋಗ್ತಾ ಇದ್ದೆ. ಈ ಕಾಡುಕೋಣಗಳು ಬಹು ಪ್ರಸಿದ್ಧಿ. ಆದರೆ ನಾನು ಡಬ್ಬಲ್‌ಬ್ಯಾರಲ್ ಬಾರುಮಾಡಿ ಮೀಸೆ ತಿರುವಿ ಹೊರಟರೆ ಈ ಕಾಡು ಕೋಣಗಳು, ಹುಲಿ ಚಿರತೆಗಳು ಕುಯ್ಯೋ ಮರ್ರ್ರೋ ಹೇಳಿ ಪಂಚಾಕ್ಷರಿ ಜಪಿಸ ತೊಡಗುವುವು. ಅನೇಕ ತೋಳಗಳು ಕರಡಿಗಳು ನಾನು ಹಲ್ಲು ಕಟಕಟನೆ ಕಡಿದೆ ನೆಂದರೆ ಕುಯ್ಯೋಮರ್ರ್ರೋ ಹೇಳಿ ಅವಿತುಕೊಳ್ಳುವುದು ಸರ್ವೆಸಾಮಾನ್ಯವಾದ ವಿಚಾರ"

ಎಂದು ಬಚ್ಚಬಾಯಿ ಬಿಚ್ಚಿ ಹೇಳಿದ ಭಾಸ್ಕರ. ನನಗೆ ನಗು ತಡೆಯುದಾಯಿತು. ಎಲಾ ಇದಕ್ಕಿಂತ ಬುರುಡೆ ಬೇಕೆ, ಈ ಹಲ್ಲಿಲ್ಲದ ಹೈದ ಹೇಗೆ ಕಟಕಟನೆ ಹಲ್ಲು ಕಡಿದ. ನಾನು ಕೇಳಿಯೇಬಿಟ್ಟೆ "ಅಯ್ಯಾ — ಭಾಸ್ಕರ ನಿನ್ನ ಬಾಯಲ್ಲಿ ಹಲ್ಲೇ ಇಲ್ಲ ಅದು ಹೇಗೆ ಹಲ್ಲು ಕಡಿಯುತ್ತಿದ್ದೆ?" ಎಂದು. "ಗೊತ್ತು ನನಗೆ ಈ ವಿಷಯ ನೀನು ನಂಬೊಲ್ಲಾಂತ–ಇಗೋ ಹೀಗೆ...." ಎಂದೆನ್ನುತ್ತಾ ಜೇಬಿನಿಂದ ಒಂದು ಜೊತೆ ಕೃತಕ ದಂತಾವಳಿ ತೆಗೆದು ಬಾಯಿಗೆ ತೊಟ್ಟುಕೊಂಡು ಕಟಕಟ ಸದ್ದುಮಾಡಿದ, ನೆಲದಮೇಲೆ ಹರಿಯುತ್ತಿದ್ದ ಇರುವೆ ಕೂಡಾ ಈ ಸದ್ದಿಗೆ ಬೆದರಲಿಲ್ಲ ಇನ್ನು ಆ ಭಯಂಕರ ಕಾಡು ಮೃಗಗಳು ಹೇಗೆ ಬೆದರಿದವು? ಎಂಬ ಪ್ರಶ್ನೆ ನನ್ನನ್ನು ಕಾಡಿತು. ಆದರೂ ಆ ಹಿತ ವಾದ ಬೋರು — ನುರಿತ ನಾಲಿಗೆಯ ತೀಟೆ ತೀರಿಸಿಕೊಳ್ಳುವ ಅವನ ಹುಮ್ಮಸ್ಸಿಗೆ ತಣ್ಣೀರೆರಚುವುದು ಸರಿತೋರಲಿಲ್ಲ. ಕಿವಿಯನ್ನು ಹಿಗ್ಗಿಸಿ ಇನ್ನೂ ಅರ್ಧ ಅಂಗುಲ ಅವನತ್ತ ಚಾಚಿ ಕಾದು ಕುಳಿತೆ ಮುಂದಿನ ಮಾತು ಕೇಳಲಿಕ್ಕೆ.

"....ಇದು ನಂಬದಿದ್ದರೆ ಬಿಡು ಅಂತ ಹೇಳ್ತಾರಲ್ಲಾ ಅಂಥ ಕಥೆಯಲ್ಲ ಕಣಯ್ಯ. ಸ್ವಂತ ಅನುಭವ. ಈ ಕಾಡುಕೋಣ ಇದೆಯಲ್ಲಾ—ನೋಡು ಈಗ ಏನೂ ತಿಳೀದ ಎವ್ವೆಹಾಗೆ ಗೋಡೆಗೆ ನೇತುಬಿದ್ದಿದೆ. ಆಗ ನಾನು ಡಬ್ಬಲ್‌ಬ್ಯಾರಲ್ ಬಂದೂಕು ತೋರಿಸಿದಾಗ ನೋಡಬೇಕಿತ್ತು ಇದರ ಆಟ. ಕಳ್ಳ ಮಳ್ಳ ಇದು ಬಲೇ ಕಿಲಾಡಿ ಆಟ ಆಡ್ತು"

"ಗುಂಡಿಟ್ಟು ಹೊಡೆದುಬಿಟ್ಟೇನು" ಎಂದು ಕೇಳಿದೆ.

"ಅದೇ ಕೇಳು — ಹಾಗೇ ಹೊರಟವನು, ಬೇಜಾರಾಗುತ್ತಲೂ ಬಂದೂಕು ಬದಿಗಿಟ್ಟು ಮರಕ್ಕೆ ಆತುಕೂತಿದ್ದೆ ಅರೆಗಣ್ಣು ಮುಚ್ಚಿ. ಎಡಗಡೆ ಪಕ್ಕದಿಂದ ಮೂಗಿನಲ್ಲಿ ಹೊಗೆಹಾಗೆ ಬಿಸಿಯುಸಿರು ಚಿಮ್ಮುತ್ತಾ ಕೆಟ್ಟದೃಷ್ಟಿಯಿಂದ ನೋಡ್ತಾ ಬಲಗ್ಗಾಲಿಂದ ನೆಲಾನ ಕೆದರಿ ಕೆದರಿ ಧೂಳೆಬ್ಬಿಸುತ್ತಾ ನನ್ನೇ ನೋಡಿತು ಕೆಣಕುವ ದೃಷ್ಟಿಯಲ್ಲಿ. ಹಾಗೇ ನಾನು ಎಡಗಡೆ ಕಣ್ಣುಹಾಯಿಸಿ ನೋಡಿದೆ. ಅದೂ ನನ್ನ ಇರಿದು ಕೊಲ್ಲೊ ಹಾಗೆ ದುರುಗುಟ್ತಾ ಇದೆ. ಎಲಾ ಪ್ರಾಣಿ – ನಿನಗಿಷ್ಟು ಕೊಬ್ಬೆ – ಮೊನ್ನೆ ತಾನೇ ಕೋವಿ ಎತ್ತಿದಾಗ ಕೈಮುಗಿದು ಪ್ರಾಣಭಿಕ್ಷೆ ಬೇಡಿ ಅಂಗಲಾಚಿದ್ದೆಯಲ್ಲ — ಈಗ ಇಷ್ಟೊಂದು ಕೊಬ್ಬೆ – ವಿನಾಶಕಾಲೇ ವಿಪರೀತ ಕೊಬ್ಬಃ ಸಾಯಿ ಎಂದು ಹಾಗೇ ಬಂದೂಕಿಗೆ ಕೈಹಾಕಿದಾಗ ಬಲಗಡೆಯಿಂದ ಒಂದು ಭಾರಿ ಹುಲಿ ಅರ್ಭಟಿಸಿತೂ"

ಎಂದು ಹಾಯಾಗಿ ಹೇಳಿದ ಭಾಸ್ಕರ. ನಾನು ಹಾಗೇ ಬಿಟ್ಟ ಕಣ್ಣಿಂದ ಎದುರಿಗಿನ ಕೋಣನ ತಲೆ ನೋಡುತ್ತಿದ್ದೆ. ಅವನೇ ಪ್ರಾರಂಭಿಸಿದ ಮತ್ತೆ.

"ಆಗ ಗೊತ್ತಾಯ್ತು ಈ ಹುಲಿರಾಯನ ಈ ಕಾಡುಕೋಣನ ಮಸಲತ್ತು. ಆ ಕಡೆ ಈ ಕಡೆ ಇಂದ ಒಟ್ಟಿಗೇ ನನ್ನಮೇಲೆ ಬಿದ್ದು ಅವುಗಳ ಶತೃವನ್ನು ಮುಗಿಸಬೇಕೂನ್ನೊ ಒಳಸಂಚು ಅದು. ಏನುಮಾಡ್ಲಿ ಅತ್ತ ಪುಲಿ ಇತ್ತ ಬೈಸನ್ನು. ನಾನು ಧೈರ್ಯಶಾಲಿ ಆಗೋಹೊತ್ತಿಗೆ ಗುಂಡಿಗೆ ಉಳಿಸಿಕೊಂಡಿದ್ದೆ. ಎಡಗಣ್ಣನ್ನು ಬಲದ ಹುಲಿಯಮೇಲೂ, ಬಲಗಣ್ಣನ್ನು ಎಡದ ಕಾಡುಕೋಣನಮೇಲೂ ಕೇಂದ್ರೀಕರಿಸಿದೆ. ಸರಕ್ಕನೆ ಕೋವಿಗೆ ಕೈಹಾಕಿ ಎರಡುಬ್ಯಾರಲ್ಲನ್ನೂ ಎಡಬಲಗಳಿಗೆ ಬಗ್ಗಿಸಿ ಒಂದೊಂದನ್ನೂ ಹುಲಿ – ಕೋಣಗಳಿಗೆ ಗುರಿಯಿಟ್ಟೆ"

—ರಾಮ ರಾಮ ಇದನ್ನ ಹೇಗೆ ನಂಬಲಿ – ನಾನು ಇಡೀ ಪ್ರಶ್ನಾರ್ಥಕ ಚಿಹ್ನೆಯಂತೆ ಬಾಗಿ ಕುಳಿತೆ. ಸಂದೇಹ – ಅನುಮಾನವೇ ಮೂರ್ತಿವತ್ತಾಗಿ ಕುಳಿತಂತೆ. ಅವನೇ ಮತ್ತೆ ಬಡಬಡಿಸಿದ.

"ಗೊತ್ತು ನನಗೆ ನೀನು ಪ್ರಶ್ನಾರ್ಥಕ ಚಿನ್ಹೆಯಂತೆ ನುಲುಗುವಿ ಎಂದು — ಇದೋ ಹೀಗೆ ಆ ಡಬ್ಬಲ್ ಬ್ಯಾರಲ್ ಗನ್ನಿನ ಒಂದೊಂದು ಬ್ಯಾರಲ್ಲನ್ನೂ ಎಡಬಲಗಳಿಗೆ ಸಮಕೋನದಲ್ಲಿ ಹೀಗೆ ಬಗ್ಗಿಸಿ ಗುರಿ ಇಟ್ಟೆ" ಎಂದು ಕೈಯ್ಯಲ್ಲಿನ ಕಾಗದವನ್ನು ಎರಡು ಕೊಳವಿಹಾಗೆ ಸುರುಳಿ ಸುತ್ತಿ ಎಡಬಲಗಳಿಗೆ ಬಗ್ಗಿಸಿ ತೋರಿಸಿಬಿಟ್ಟ ಭಡವ ನನ್ನನ್ನೇನು ಎಳೇಕೂಸು, ಏನು ಹೇಳಿದರೂ ನಂಬುವ ಹುಡುಗ ಅಂತ ತಿಳಿದನೇನೋ ಈ ಭಾಸ್ಕರ. ಆದರೂ ನಾನು ಪ್ರತಿಭಟಿಸಲಿಲ್ಲ – ಆ ಹಿತವಾದ ಕೊರೆತವನ್ನು ಮಧ್ಯೆ ತಡೆಯಲು ಯಾರಿಗಾದರೂ ಮನಸ್ಸು ಬರುತ್ತದೆಯೆ? – "ಹೂಂ ಆಮೇಲೆ?" ಎಂದು ಅವನ ಬುರುಡೆ ಮುಂದುವರಿಯಲು ಅವಕಾಶಮಾಡಿಕೊಟ್ಟೆ

"ಈಗಮಾತ್ರ ಹುಲಿರಾಯ – ಕಾಡುಕೋಣಪ್ಪ ಇಬ್ಬರೂ ಸುಸ್ತು – ನಾನು ಕೋವಿಯ ಕುದುರೆ ಎಳೆದರೆ ಅಲ್ಲಿಗೆ ಅವರಿಬ್ಬರ ಇಹದ ಆಟ ಪವಮಾನ ಹೇಳುತ್ತೆ ಅನ್ನೋದು ಅವಕ್ಕೆ ಗೊತ್ತಾಯಿತು. ನಾನು ಬಿಟ್ಟನೆ – ಹಾಗೇ ಮೆಲ್ಲಗೆ ಬಲಕ್ಕೆ ಸರಿಯತೊಡಗಿ ಹುಲಿರಾಯನ ಹಲ್ಲಿಗೆ ಸರಿಯಾಗಿ ಒಂದು ಬ್ಯಾರಲ್ ಇಟ್ಟೆ ಅದು ತತ್ತರಿಸಿತು. ಕೈ ಕೈಮುಗಿಯಿತು. ಅವನ ಕಿವಿ ಹಿಂಡಿ 'ಇನ್ನೊಮ್ಮೆ ಈ ತಲೆಹರಟೆ ಬೇಡ' ಎಂದು ಬುದ್ಧಿ ಹೇಳಿ ಹೊಡೆದಟ್ಟಿದೆ. ಬಿದ್ದೆನೋ ಕೆಟ್ಟೆನೋ ಅಂತ ಪರಾರಿ ಹೇಳ್ತು ಆ ವ್ಯಾಘ್ರ. ಮತ್ತೆ ಅತ್ತ ಇತ್ತ ತಿರುಗಿದ ಗನ್ನಿನ ಎರಡು ಕೊಳವಿಗಳನ್ನೂ ಒಂದುಕೂಡಿಸಿ ಈ ಕೋಣನ್ನ ವಿಚಾರ್ಸ್ತೋಣಾಂತ ಬಂದೆ ಎಡಗಡೆಗೆ. ಅದರ ಕೊಬ್ಬು ಇಳಿದಿರಲಿಲ್ಲ – ಬಿಸಿಹೊಗೆ ಮೂಗಿನಿಂದ ನನ್ನ ಕಣ್ಣಿಗೆ ತೂರಿ ಕೆಡವಿ ಇರಿದು ಕೊಲ್ಲಲು ನೋಡಿತು – ಆಗಲೇ ನನ್ನ ಕ್ರಾಪು ಕೆದರಿದ್ದು – ಬಲಗೈಯ್ಯಲ್ಲಿ ಅದರ ಕೊಂಬು

ಹಿಡಿದು ಕತ್ತಿನಮೇಲೆ ಕುಳಿತು ಬಾಗಿ ಅದರ ಕಣ್ಣಲ್ಲಿ ನೋಡಿಕೊಂಡು ತಲೆ ಹೀಗೆ ಬಾಚಿಕೊಂಡೆ" ಎಂದು ಮತ್ತೆ ಕ್ರಾಪು ತೀಡಿದ. ನಾನು ಅನೇಕ ನಂಬದಿದ್ದರೆ ಬಿಡಿ ಕಥೆ ಕೇಳಿದ್ದೆ – ತೀರ ಇವನದು ಎತ್ತರದ ಬುರುಡೇಂದ್ರೆ ಹಿಮಾಚಲದಿಂದಲೇ ಹೇಳುತ್ತಿದ್ದ.

"ಆಮೇಲೆ ಇದನ್ನ ಕೊಂದಿದ್ದೋ" ಎಂದು ಬೇಸರದಿಂದ ಮುಕ್ತಾಯದತ್ತ ಅವನ ಮನಸೆಳೆದೆ.

"ಹೂಂ ಕೇಳು–ತಲೆಗೆ ಸುತ್ತಿದ ಮಫ್ಲರಿಂದ ಅದಕ್ಕೆ ನೇಣು ಬಿಗಿದು ಉಸಿರು ಕಟ್ಟಿಸಿ ಕೊಂದೆ – ಆಮೇಲೆ ಮುಚ್ಚಿಗಾರ್ರಿಗೆ ಹೇಳಿ ತಲೆ ಮಾತ್ರ ತುಂಬಿಸಿ ಮಾವನವರು ನನಗೆ ಹೆಣ್ಣು ಕೊಟ್ಟ ನೆನಪಿಗೆ ಇಲ್ಲಿ ತಗುಲಿಸಿದ್ದೇನೆ" ಎಂದು ನಸುನಕ್ಕಾಗ ಕೃತಕ ದಂತಾವಳಿ ಹೊಳೆದುವು.

ಆ ತೃಪ್ತಿಯ ನಗು ಮಾಯವಾದದ್ದು ಭಾಸ್ಕರನ ಮಾವಯ್ಯ ಬಂದಾಗಲೆ. 'ಹಲ್ಲೊ' ಎಂದು ಸ್ವಾಗತಿಸಿದಾಗ. ಉಭಯಕುಶಲೋಪರಿ–ಸೆಕೆ, ಮಳೆ, ಮಲ್ನಾಡು ಮಕ್ಕಳ ಮದುವೆಯಿಂದ ಹಾಸುಹೊಕ್ಕಾಗಿ ಹೊರಟ ಮಾತು ಅಳಿಯಂದಿರ ಕಡೆಗೆ ವಾಲಿದಾಗ, ನಾನು ಸಹಜವಾಗೇ ಹೇಳಿದೆ.


"ನೀವೇ ಪುಣ್ಯಾತ್ಮರು – ನಿಮ್ಮ ಶೂರ ಅಳಿಯಂದಿರು ನೀವು ಮಗಳನ್ನು ಅವರಿಗೆ ಒಪ್ಪಿಸಿದ್ದರ ನೆನಪಿಗಾಗಿ ಈ ಕಾಡುಕೋಣನ ತಲೆ ಶಿಕಾರಿಮಾಡಿ ಈ ವರಾಂಡ ಅಲಂಕರಿಸಿದ್ದಾರೆ ಅವರ ಧೈರ್ಯ — ನಿಮ್ಮಲ್ಲಿನ ಪ್ರೀತಿ ತೋರ್ಸತ್ತೆ" ಎಂದೆ. ಭಾಸ್ಕರನ ಮಾವಂದಿರು ಹುಬ್ಬುಗಂಟಿಕ್ಕಿದರು. ಭಾಸ್ಕರ ಮುದುಡಿದ ಬಸವನ ಹುಳುವಿನಂತೆ ಕುಳಿತ.

"ಈ ಅಳಿಯಂದಿರಿಗೆ ಆ ಧೈರ್ಯವೇ – ಅದು ಬೆಂಗಳೂರಲ್ಲಿದ್ದಾಗ ಒಬ್ಬಾತ ಮಾಡಿಕೊಟ್ಟಿದ್ದ ಹಸನಾದ ಜೇನುಮೇಣದಿಂದ" ಎಂದರು. ಭಾಸ್ಕರ ಅಲ್ಲಿಗೂ ನಕ್ಕ. "ಇಂತಹ ನಂಬದಿದ್ದರೆ ಬಿಡಿ ಕಥೆಗೆ ಮಾರುಹೋಗಿಯೇ ಶ್ರೀಯುತರ ಕುಮಾರಿ ನನಗೆ ಕೈಕೊಟ್ಟದ್ದು" ಎಂದು ಒಳಕ್ಕೆ ಹೋಗಿಬಿಟ್ಟ.

(ಆಕಾಶವಾಣಿ ಮೈಸೂರು ಕೃಪೆಯಿಂದ)

— ದಾಶರಥಿ ದೀಕ್ಷಿತ್.

ಅನುಭವಸ್ಥರನ್ನು ಅನುಕರಿಸಿರಿ



ನಿಮ್ಮ ಎಂಜಿನ್ನಿಗೆ ಶಕ್ತಿಯನ್ನು ಕೊಡಲು ಭಾರತದ ಅತ್ಯುತ್ಕೃಷ್ಟವಾದ ಪೆಟ್ರೋಲು, ಅದನ್ನು ರಕ್ಷಿಸಲು ಇಂದಿನ ಅತ್ಯುತ್ತಮವಾದ ಮೋಟಾರೆಣ್ಣೆ — ಎಂದಮೇಲೆ ಅನೇಕ ಟ್ರಕ್ಕು ಮತ್ತು ಟ್ಯಾಕ್ಸಿಗಳನ್ನು ನಡೆಸುವವರು ಮೋಬಿಲ್‌ಗ್ಯಾಸ್ ಮತ್ತು ಮೋಬಿಲಾಯಿಲ್ ಉಪಯೋಗಿಸುವುದರಲ್ಲಿ ಏನಾಶ್ಚರ್ಯ!

ಯಾವಾಗಲೂ ಇವುಗಳೇ ಬೇಕೆಂದು ಕೇಳಿರಿ:

ದ್ವಿಶಕ್ತಿಯುತವಾದ

ಮೋಬಿಲ್‌ಗ್ಯಾಸ್

* ಇದು ಅನೇಕ ಅಡಿಟಿವ್‌ಗಳ ಮಿಶ್ರಣವಾದ ಮೋಬಿಲ್ ಪವರ್ ಕಾಂಪೌಂಡನ್ನೊಳಗೊಂಡಿದೆ ಈ ಕಾಂಪೌಂಡಿನಷ್ಟು ಬಲವಾದ ಅಡಿಟಿವ್‌ಗಳ ಮಿಶ್ರಣವು ಪೆಟ್ರೋಲಿನಲ್ಲಿ ಇದುವರೆಗೆ ಸೇರಿಸಲ್ಪಟ್ಟಿರಲೇ ಇಲ್ಲ
* ಇದು ನೀವು ಕೊಂಡುಕೊಳ್ಳಬಹುದಾದ ಬೇರೆ ಯಾವ ಪೆಟ್ರೋಲಿನಕಿಂತಲೂ ಹೆಚ್ಚು ಎಂಜಿನ್ ತೊಂದರೆಗಳನ್ನು ನಿವಾರಣೆ ಮಾಡುತ್ತದೆ

ದ್ವಿವಿಧ ರಕ್ಷಣೆ ಕೊಡುವ

ಮೋಬಿಲಾಯಿಲ್

* ಒಂದಕ್ಕೆ ಎರಡರಷ್ಟು ಶುದ್ಧೀಕರಣ ಗುಣ — ನಿಮ್ಮ ಕಾರು ಹೆಚ್ಚು ಸುಗಮವಾಗಿ ನಡೆಯುವಂತೆ ಮಾಡಿ, ಎಂಜಿನ್ನಿಗೆ ಹೆಚ್ಚು ಶಕ್ತಿಯನ್ನು ಕೊಟ್ಟು, ಪ್ರತಿ ಗ್ಯಾಲನ್ ಪೆಟ್ರೋಲಿಗೂ ಹೆಚ್ಚು ಮೈಲೇಜನ್ನು ಕೊಡುತ್ತದೆ.
* ಸವೆತದಿಂದ ಎರಡರಷ್ಟು ರಕ್ಷಣೆ — ನಿಮ್ಮ ಎಂಜಿನ್ನಿನ ಜೀವಮಾನವನ್ನು ಹೆಚ್ಚಿಸಿ, ಓವರ್‌ಹಾಲ್ ಮಾಡುವ ಅಗತ್ಯತೆಯನ್ನು ಕಡಿಮೆ ಮಾಡುತ್ತದೆ.

ಹಾರುವ ಕೆಂಪು ಕುದುರೆಯ ಗುರುತಿರುವಲ್ಲಿ ತುಂಬಿಸಿ
ಕೊಂಡು ಉಪಯೋಗಿಸಲು ಇಂದೇ ಷುರು ಮಾಡಿರಿ!

ಸ್ಟ್ಯಾಂಡರ್ಡ್-ವ್ಯಾಕ್ಯೂಮ್ ಆಯಿಲ್ ಕಂಪೆನಿ
(ಕಂಪೆನಿಯ ಮೆಂಬರುಗಳ ಹೊಣೆಗಾರಿಕೆಯು ಮಿತಿಪಡೆ)

V. 1373

REG. No. M. 4718 KORAVANJI, AUGUST 1955



ವೈಟೋಫೆರಿನ್

(ಆಧುನಿಕ ಶಕ್ತಿವರ್ಧಕ ಟಾನಿಕ್)

ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ, ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್‌ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ.

★ ★

ತಯಾರಕರು :

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರಟರಿ ಲಿಮಿಟೆಡ್,

ಮಲ್ಲೇಶ್ವರಂ - - - ಬೆಂಗಳೂರು 3.

Printed by B. S. Iyengar, Printer, Bangalore City.

Publisher—B N. Gupta. Editor—M. Sivaram